ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ವೈಭವ್ ಸೂರ್ಯವಂಶಿ ಆಟದ ಉತ್ತುಂಗದಲ್ಲಿರುವಂತೆ ಕಾಣಿಸಿ ಕೇವಲ 95 ಎಸೆತಗಳಲ್ಲಿ 171 ರನ್ ಸಿಡಿಸಿದರು. ಭಾರತ ತಂಡ 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಶುಕ್ರವಾರ ಯುಎಇ ತಂಡದ ಮೇಲೆ 234 ರನ್‌ಗಳ ಭಾರಿ ಜಯ ದಾಖಲಿಸಿತು.

13 ಡಿಸೆಂಬರ್ 2025 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 271 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ನೋಡಲು ಚಂದ, ಆದರೆ ರೈತರಿಗೆ ಕಷ್ಟ » 2

ರಸ್ತೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಿ : ಡಿ.ಸಿ. » 3

2027ರ ಜನಗಣತಿಗೆ 11,718 ಕೋ.ರೂ. ಸಂಪುಟ ಅಸ್ತು » 4

ಡಿನ್ನರ್ ಮೀಟಿಂಗ್ ಬಿಟ್ಟು ಸದನಕ್ಕೆ ಸತ್ಯ ಹೇಳಿ

ಲಕ್ಷ್ಮೀ ಹೆಬ್ಬಾಳ್ಕರ್ ತಪ್ಪು ಮಾಹಿತಿಗೆ ಪ್ರತಿಪಕ್ಷ ಗದ್ದಲ : ಸರ್ಕಾರದ ವಿರುದ್ಧ ವಾಗ್ದಾಳಿ

• ಪ್ರಜೋದಯ ವರದಿ

ಬೆಳಗಾವಿ: ವಿಧಾನಮಂಡಲ ಚಳಿಗಾಲದ ಅಧಿವೇಶನದಲ್ಲಿ ಗೃಹಲಕ್ಷ್ಮೀ ಯೋಜನೆ ಹಣವನ್ನು ಫಲಾನುಭವಿಗಳಿಗೆ ನೀಡುವ ಬಗ್ಗೆ ಸದನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಪ್ಪು ಮಾಹಿತಿ ನೀಡಿದ್ದಾರೆಂದು ಶುಕ್ರವಾರ ವಿಪಕ್ಷ ನಾಯಕರು ಗದ್ದಲ ಉಂಟು ಮಾಡಿದರಲ್ಲದೇ, ಅಧಿವೇಶನ ಮುಗಿಯುವವರೆಗೂ ಡಿನ್ನರ್ ರಾಜಕಾರಣಕ್ಕೆ ಕಡಿವಾಣ ಹಾಕುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು.

ಔತಣ ಕೂಟಗಳು ಸಚಿವರ ಕಾರ್ಯವೈಖರಿ ಮೇಲೆ ಪರಿಣಾಮ ಬೀರುತ್ತವೆ ಎಂದು ಆರೋಪಿಸಿದ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಅವರು, ಔತಣಕೂಟದಲ್ಲಿ ಭಾಗವಹಿಸುವ ಮಂತ್ರಿಗಳ ಹೆಸರನ್ನು ಉಲ್ಲೇಖಿಸಿ, ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಕಾಂಗ್ರೆಸ್‌ನ ಡಿನ್ನರ್ ರಾಜಕಾರಣದಿಂದ ಸಚಿವರು ಸದನಕ್ಕೆ ಬರುವ ಮೊದಲು ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳಲು, ಪ್ರಶ್ನೆಗಳಿಗೆ ಪ್ರತಿಕ್ರಿಯಿಸಲು ಸಮಯ ನೀಡುತ್ತಿಲ್ಲವೆಂದು ದೂರಿದರು.

ವಿಧಾನಸಭೆ ಅಧಿವೇಶನ ನಡೆಯುತ್ತಿದ್ದು, ಸದನದಲ್ಲಿ ಕೇಳಿ ಬರುವ ಸಮಸ್ಯೆಗಳು ಅಥವಾ ಪ್ರಶ್ನೆಗಳಿಗೆ ಉತ್ತರಿಸಲು ಸಚಿವರು ಸಮರ್ಥರಿದ್ದು, ಸಜ್ಜಾಗಿ ಬರುತ್ತಾರೆಂದು ನಂಬಿದ್ದೇವೆ. ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಗೃಹ ಲಕ್ಷ್ಮಿ ಯೋಜನೆ ಫಲಾನುಭವಿಗಳ ಖಾತೆಗೆ ಹಣ ಜಮಾ ಆಗದಿರುವ ಬಗ್ಗೆ ಮಹೇಶ್ ಟೆಂಗಿನಕಾಯಿ (ಬಿಜೆಪಿ ಶಾಸಕ) ಕೇಳಿದಾಗ, ಆಗಸ್ಟ್ ವರೆಗೆ ಹಣ ಮಂಜೂರಾಗಿದೆ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.

ಎರಡು ತಿಂಗಳಿನಿಂದ ಇನ್ನೂ ಹಣ ಜಮಾ ಆಗಿಲ್ಲವೆಂದು ಶಾಸಕರು ಗಮನಕ್ಕೆ ತರಲು ಮುಂದಾದಾಗ, ನಾನು ಎಲ್ಲ ಹೇಳಿದ್ದೇನೆಂದು ಉತ್ತರಿಸಿದರು. ಪ್ರತಿಪಕ್ಷದ ಮುಖಂಡ ಆರ್. ಅಶೋಕ್ ಮತ್ತು ಸುನೀಲ್ ಕುಮಾರ್ ಯಾವ ತಿಂಗಳವರೆಗೆ ಹಣ ಬಿಡುಗಡೆಯಾಗಿದೆ ಎಂಬುದನ್ನು ಸಚಿವರು

ಸ್ಪಷ್ಟವಾಗಿ ಉತ್ತರಿಸಿಲ್ಲ, ಸದನಕ್ಕೆ ಸುಳ್ಳು ಮಾಹಿತಿ ನೀಡಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದಲ್ಲಿ ಗೊಂದಲಗಳಿವೆ. ನೈಟ್ ಡಿನ್ನರ್ ಮೀಟಿಂಗ್‌ಗಳು ಜೋರಾಗಿವೆ. ಗೃಹಸಚಿವರು ಡಿನ್ನರ್ ಮೀಟಿಂಗ್‌ಗಳಿಗೆಲ್ಲಾ ಬಂದೋಬಸ್ತ್ ಮಾಡಿಸಿ, ಬೇಗ ಹಾಕಿಸಿ ಬಿಡಿ. ಹತ್ತು ದಿನಗಳ ಅಧಿವೇಶನ ನಡೆಯೋ ತನಕ ಬ್ರೇಕ್ ಹಾಕಿ ಎಂದು ಸಲಹೆ ನೀಡಿದರು.

ಸಿ.ಎಂ. ಸಮಜಾಯಿಷಿ

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿ, ಗೃಹ ಲಕ್ಷ್ಮಿ ಯೋಜನೆಯ ಹಣವನ್ನು ಆಗಸ್ಟ್ ತಿಂಗಳವರೆಗೆ ಬಿಡುಗಡೆ ಮಾಡಿರುವ ಬಗ್ಗೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದ್ದಾರೆ. ಮಾರ್ಚ್ ತಿಂಗಳ ಹಣ ಬಿಡುಗಡೆ ಆಗಿಲ್ಲ, ಬಿಡುಗಡೆ ಮಾಡೋಣ. ಸಾಮಾನ್ಯವಾಗಿ 2 ತಿಂಗಳು ವಿಳಂಬ ಆಗುತ್ತದೆ. ಬಂದಿಲ್ಲವೆಂದರೆ ಕೂಡಲೇ ಕೊಡಿಸುವ ಕೆಲಸ ಮಾಡೋಣವೆಂದು ಸಮಜಾಯಿಷಿ ನೀಡಿದರು.

ಈ ವೇಳೆ ಆರ್.ಅಶೋಕ್ ಮಧ್ಯೆ ಪ್ರವೇಶಿಸಿ, ಸದನದಲ್ಲಿ ಸಚಿವರು ನೀಡುವ ಉತ್ತರ ಅಥವಾ ಹೇಳಿಕೆಗಳನ್ನು ನಾವು ಹೇಗೆ ನಂಬಬೇಕು, ಇದು ಸದನಕ್ಕೆ ಅಗೌರವ ತೋರಿದಂತಾಗುತ್ತದೆ. ಸಚಿವರು ಡಿನ್ನರ್ ರಾಜಕಾರಣದಲ್ಲಿ ಪಾಲ್ಗೊಳ್ಳುವುದು ಈ ಪರಿಸ್ಥಿತಿಗೆ ಕಾರಣವಾಗಿದೆ ಎಂದು ಆರೋಪಿಸಿದರು. » ನಾಲ್ಕನೇ ಪುಟದಲ್ಲಿ

ಹಕ್ಕುಚ್ಯುತಿ ಉಲ್ಲಂಘನೆ: ಮಾತಿನ ಚಕಮಕಿ

ಬಿಜೆಪಿ ಶಾಸಕ ಸುನೀಲ್ ಕುಮಾರ್, ಫಲಾನುಭವಿಗಳ ಖಾತೆಗೆ ಹಣ ಜಮಾ ಆಗುವುದನ್ನು ಖಚಿತಪಡಿಸಿಕೊಳ್ಳುವುದು ಸದನದ ಒಂದು ಭಾಗವಾಗಿದೆ. ಆದರೆ, ಸಚಿವರು ಸದನಕ್ಕೆ ತಪ್ಪು ಉತ್ತರ ನೀಡುವ ಮೂಲಕ ಹಕ್ಕು ಚ್ಯುತಿ ಉಲ್ಲಂಘನೆ ಮಾಡಿದ್ದಾರೆಯೇ ಎಂಬುದನ್ನು ನೋಡಬೇಕು ಎಂದರು. ಕಾಂಗ್ರೆಸ್ ಶಾಸಕರಾದ ಶಿವಲಿಂಗೇಗೌಡ ಮತ್ತು ಎನ್.ಹೆಚ್ ಕೋನರೆಡ್ಡಿ ಅವರು ಸುನೀಲ್ ಕುಮಾರ್ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿದರು, ಇದು ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ನಡುವೆ ತೀವ್ರ ಮಾತಿನ ಚಕಮಕಿಗೆ ಕಾರಣವಾಯಿತು.

ಬ್ಲ್ಯಾಕ್‌ಮೇಲ್, ವಸೂಲಿ ಪತ್ರಕರ್ತರ ವಿರುದ್ಧ ದೂರು ನೀಡಿ

ಪತ್ರಕರ್ತರ ಸಂಘ ಅಡ್ಡದಾರಿ ಹಿಡಿಯುವವರ ಪರ ಇಲ್ಲ : ಜೆ.ಆರ್.ಕೆಂಚೇಗೌಡ

• ಪ್ರಜೋದಯ ವರದಿ

ಹಾಸನ: ಪತ್ರಕರ್ತರು ಅಥವಾ ಯುಟ್ಯೂಬ್ ಚಾನಲ್ ಹೆಸರಿನಲ್ಲಿ ಬ್ಲ್ಯಾಕ್‌ಮೇಲ್, ವಸೂಲಿ ಕುರಿತು ಪುರಾವೆ ಸಹಿತ ದೂರು ನೀಡಿದರೆ ಕ್ರಮ ಕೈಗೊಳ್ಳಲಾಗುವುದೆಂದು ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘಕ್ಕೆ, ಪೊಲೀಸರಿಗೆ ದೂರು ನೀಡಲು ಆಗದಿದ್ದರೆ ನ್ಯಾಯಾಲಯಗಳಲ್ಲೂ ಮಾನ ನಷ್ಟ ಮೊಕದ್ದಮೆ ಹೂಡಬಹುದು. ಅಡ್ಡದಾರಿ ಹಿಡಿಯುವ ಪತ್ರಕರ್ತರ ಪರವಾಗಿ ನಮ್ಮ ಸಂಘ ಇಲ್ಲವೆಂದು ಸ್ಪಷ್ಟಪಡಿಸಿದರು.

ರಾಜಕಾರಣಿಗಳು, ಸಂಘ-ಸಂಸ್ಥೆಗಳ ಮುಖ್ಯಸ್ಥರು ಪತ್ರಕರ್ತರ ಸೋಗಿನಲ್ಲಿ ತಮಗೆ ಯಾರೇ ತೊಂದರೆ ನೀಡಿದರೂ ಸಂಘದ ಗಮನಕ್ಕೆ ತರುವ ಮೂಲಕ ಸಹಕಾರ ನೀಡಬೇಕು. ಹಾಗೆಯೇ ಆರ್‌ಟಿಐ ಹೆಸರಿನಲ್ಲಿ ವಸೂಲಿಕೋರರ ವಿರುದ್ಧವೂ ದೂರು ಕೊಡಬಹುದು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಂಗ

ಸಂಸ್ಥೆಯಾಗಿರುವ ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ರಾಜ್ಯದಲ್ಲೇ ತನ್ನದೆಯಾದ ಶಿಸ್ತು, ಬದ್ಧತೆ, ಕಾರ್ಯ ತತ್ಪರತೆ ಉಳಿಸಿಕೊಂಡು ಬಂದಿದೆ. ಸಂಘದ ಸರ್ವ ಸದಸ್ಯರೂ ಅದಕ್ಕೆ ಬದ್ಧರಾಗಿರಬೇಕು. ಸಂಘದ ಹೆಸರಿನಲ್ಲಿ ಅಥವಾ ಸದಸ್ಯರೆಂದು ಹೇಳಿಕೊಂಡು ಬ್ಲ್ಯಾಕ್‌ಮೇಲ್ ಮಾಡಿದರೆ ತಕ್ಷಣ ಸಂಘದ ಕಚೇರಿ ಅಥವಾ ಸಂಬಂಧಪಟ್ಟ ಪೊಲೀಸರಿಗೆ ದೂರು ನೀಡುವಂತೆ ಮನವಿ ಮಾಡಿದರು.

ಕೆಲವರು ನಾವು ಈ ಸಂಸ್ಥೆಯ ಪ್ರತಿನಿಧಿಗಳು ಅಥವಾ ವರದಿಗಾರರು, ಯೂಟ್ಯೂಬ್ ಚಾನೆಲ್‌ನವರು ಎಂದು ಹೇಳಿಕೊಂಡು ರಾಜಕಾರಣಿಗಳು, ಗುತ್ತಿಗೆದಾರರು ಅಥವಾ ಸಂಘ-ಸಂಸ್ಥೆಗಳ ಬಳಿ ಹಣಕ್ಕಾಗಿ ಬೇಡಿಕೆ ಇಟ್ಟರೆ, ಇಲ್ಲವೇ ಆಮಿಷ, ಬೆದರಿಕೆ ಹಾಕಿದರೆ ದೂರು ನೀಡಬೇಕು. ಇಂತಹ ವಾತಾವರಣದಿಂದ ಪ್ರಾಮಾಣಿಕ ಪತ್ರಕರ್ತರಿಗೆ ಕಿರಿಕಿರಿ ಆಗಲಿದೆ. ಬ್ಲ್ಯಾಕ್‌ಮೇಲ್ ಪತ್ರಕರ್ತರಿಗೆ ಕಡಿವಾಣ ಹಾಕುವ ಅನಿವಾರ್ಯತೆ ಇದೆ ಎಂದು ತಿಳಿಸಿದರು.

ಡಿ.28ರಂದು ತಾಲ್ಲೂಕು ಸಂಘದ ಚುನಾವಣೆ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸೂಚನೆ ಮೇರೆಗೆ ಜಿಲ್ಲೆಯ ಏಳು ತಾಲ್ಲೂಕು ಘಟಕಗಳ ಚುನಾವಣೆಯನ್ನು ಡಿ.28 ರಂದು ಏಕ ಕಾಲಕ್ಕೆ ನಿಗದಿಗೊಳಿಸಲಾಗಿದೆ. ಚುನಾವಣಾ ನಿರ್ವಹಣೆಗಾಗಿ ಪ್ರತಿ ತಾಲ್ಲೂಕಿಗೆ ಇಬ್ಬರು ಚುನಾವಣಾಧಿಕಾರಿಗಳನ್ನು ನಿಯೋಜನೆ ಮಾಡಲಾಗಿದೆ ಎಂದರು. ಸಂಘದ ಉಪಾಧ್ಯಕ್ಷ ಎನ್. ನಂಜುಂಡೇಗೌಡ, ಜಿ. ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಜಿ. ಸುರೇಶ್, ಕಾರ್ಯದರ್ಶಿಗಳಾದ ಬಿ.ಆರ್.ಬೊಮ್ಮೇಗೌಡ, ಕೆ.ಎಂ.ಹರೀಶ್, ಖಜಾಂಚಿ ತ್ಯಾಗರಾಜು (ಪ್ರಕಾಶ್) ಇದ್ದರು.

ಬಾಗೇಶಪುರ ರೈಲು ನಿಲ್ದಾಣಕ್ಕೆ 65ರ ಸಂಭ್ರಮ



ವಾಸ್ತು ಶಿಲ್ಪದಿಂದ ಗಮನ ಸೆಳೆದಿರುವ ನಿಲ್ದಾಣ | 1960ರಲ್ಲಿ ನಿರ್ಮಾಣ

• ಪ್ರಜೋದಯ ವರದಿ

ಹಾಸನ: ಮೈಸೂರು ನೈರುತ್ಯ ರೈಲ್ವೆ ವಿಭಾಗದ ಹಳೆಯ ರೈಲು ನಿಲ್ದಾಣಗಳಲ್ಲಿ ಒಂದಾಗಿರುವ ಅರಸೀಕೆರೆ ತಾಲ್ಲೂಕಿನ ಬಾಗೇಶಪುರ ರೈಲು ನಿಲ್ದಾಣವನ್ನು ಕೇಂದ್ರ ಸರ್ಕಾರ ಮಹತ್ವದ ತಾಣಗಳ ಪಟ್ಟಿಗೆ ಸೇರಿಸಿದೆ.

ಮೈಸೂರು, ಸಾಗರ ಹಾಗು ಬಾಗೇಶಪುರ ನಿಲ್ದಾಣಗಳನ್ನು ಈ ಪಟ್ಟಿಗೆ ಸೇರಿಸಲಾಗಿದೆ. 1960ರಲ್ಲಿ ಆರಂಭವಾದ ಈ ನಿಲ್ದಾಣ ಹಲವು ವಿಶೇಷತೆಗಳನ್ನು ಹೊಂದಿದೆ. ಕಾಲದ ತಿರುವುಗಳನ್ನು ಸಾಕ್ಷಿಯಾಗಿ ಹುದುಗಿಸಿಟ್ಟುಕೊಂಡಿರುವ ಈ ನಿಲ್ದಾಣ ತನ್ನ ಅಪರೂಪದ ವಾಸ್ತುಶಿಲ್ಪ, ಸಂಸ್ಕೃತಿ ಸ್ಪರ್ಶ ಹಾಗು ಇತಿಹಾಸದ ಮಹತ್ವ ದಿಂದ ವಿಶಿಷ್ಟಸ್ಥಾನಕಾಯ್ದುಕೊಂಡಿದೆ. ರೈಲು ಮಾರ್ಗದ ಅಭಿವೃದ್ಧಿಯ ಜೊತೆಗೆ ಗ್ರಾಮೀಣ ಬದುಕಿನ ರೂಪಾಂತರಕ್ಕೆ ಸಹ ಕಾರಣವಾದ ಈ ನಿಲ್ದಾಣ ಹಳೆಯ ನೆನಪು ಮತ್ತು ಹೊಸ ಪ್ರಯಾಣಗಳ ಸೇತುವೆಯಾಗಿ ಇಂದಿಗೂ ಹೆಮ್ಮೆಯಿಂದ ನಿಂತಿದೆ.

1960ರಲ್ಲಿ ನಿರ್ಮಿಸಲಾದ ಬಾಗೇಶಪುರ ರೈಲು ನಿಲ್ದಾಣವು ವಸಾಹತುಶಾಹಿ ವಾಸ್ತುಶಿಲ್ಪ ಹಾಗು ಜನಪದ ವಾಸ್ತು ಶೈಲಿಗಳ ವಿಶಿಷ್ಟ ಸಂಯೋಜನೆಯನ್ನು ಪ್ರತಿಬಿಂಬಿಸುತ್ತದೆ. ಹಳೆಯ ಮೈಸೂರು ಪ್ರದೇಶದ ಅನೇಕ ಪಾರಂಪರಿಕ ರೈಲು ನಿಲ್ದಾಣಗಳಿಗೆ ಸೇರಿರುವ ಸಂಯುಕ್ತ ವಾಸ್ತು ವಿನ್ಯಾಸವನ್ನು ಈ ಕಟ್ಟಡ ಹೊಂದಿದೆ. ಮುಖ್ಯ ಕಟ್ಟಡವು ನಾಲ್ಕು ದಿಕ್ಕುಗಳಿಗೆ ವಿಸ್ತರಿಸಿರುವ ಮಂಗಳೂರು ಟೈಲ್ಸ್‌ನ ಗೇಬಲ್ ಛಾವಣಿ ಹೊಂದಿದ್ದು, ಪ್ರತಿಯೊಂದು ಗೇಬಲ್‌ನಲ್ಲಿ ವೃತ್ತಾಕಾರದ ಗಾಜಿನ ಕಿಟಕಿಯಿಂದ ಅಲಂಕರಿಸಲಾಗಿದೆ. ಸಣ್ಣ ವರಾಂಡಾ ಮತ್ತು ಕಟ್ಟಡದ ಸುತ್ತಲಿನ ಕಡಪ ಕಲ್ಲಿನ ನೆಲಹಾಸು ಜನಪದ ವಾಸ್ತುಶೈಲಿಯ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ. ಪ್ರಸ್ತುತ ಈ ನಿಲ್ದಾಣದಲ್ಲಿ ನಿತ್ಯ ಆರು ರೈಲುಗಳು ನಿಲುಗಡೆ ಹೊಂದಿವೆ.

1918ರಲ್ಲಿ ರೈಲು ಪ್ರಯಾಣ ಆರಂಭ

ಭಾರತದಲ್ಲಿ 1853ರಲ್ಲಿ ರೈಲು ಸಂಚಾರ ಪ್ರಾರಂಭವಾಯಿತಾದರೂ ಹಾಸನ ಜಿಲ್ಲೆಯಲ್ಲಿ 1917 ರಿಂದ ರೈಲು ಓಡಾಟ ಪ್ರಾರಂಭವಾಯಿತು. ಆದೇ ರೀತಿ ಬಾಗೇಶಪುರ ಮಾರ್ಗದಲ್ಲಿ 19178ರ ಜನವರಿ 3 ರಂದು ಅರಸೀಕೆರೆ, ಬಾಗೇಶಪುರ, ಹಾಸನ ಮಾರ್ಗವಾಗಿ ಮೈಸೂರಿಗೆ ಮೊದಲ ರೈಲು ಓಡಾಟ ಶುರು ವಾಯಿತು. ಅಂದರೆ ರೈಲು ಸಂಚಾರ ಪ್ರಾರಂಭವಾದ 42 ವರ್ಷಗಳ ಬಳಿಕ ನಿಲ್ದಾಣ ತಲೆ ಎತ್ತಿತು. ಇದು ರೈಲು ಪರಂಪರೆಯ ಪ್ರಮುಖ ಸಂಪರ್ಕಗಳಲ್ಲಿ ಒಂದಾಗಿದೆ. ಮೈಸೂರು ವಿಭಾಗವು ತನ್ನ ರೈಲು ಆಸ್ತಿಗಳ ಐತಿಹಾಸಿಕ ಹಾಗು ಸಾಂಸ್ಕೃತಿಕ ಮಹತ್ವವನ್ನು ಕಾಪಾಡುತ್ತಾ ಸಮುದಾಯದೊಂದಿಗೆ ಉತ್ತಮ ಸಂವಹನವನ್ನು ಮುಂದುವರಿಸುತ್ತಿದೆ. ನಿಲ್ದಾಣದ ಸುತ್ತಲೂ ಹೇರಳ ಪ್ರಮಾಣದಲ್ಲಿ ವಿವಿಧ ಜಾತಿಯ ಗಿಡಗಳನ್ನು ಬೆಳೆದಿದ್ದು, ಸುಂದರ ಉದ್ಯಾನವನದ ಅನುಭವವನ್ನು ನೀಡುತ್ತದೆ.

ಜಿಲ್ಲೆಯ ಅರಕಲಗೂಡು, ಬೇಲೂರು ಹೊರತುಪಡಿಸಿ ಬೇರೆ ಎಲ್ಲಾ ತಾಲ್ಲೂಕುಗಳು ರೈಲು ಸಂಪರ್ಕ ಹಾಗು ನಿಲ್ದಾಣಗಳನ್ನು ಒಳಗೊಂಡಿದೆ. ಎಲ್ಲಾ ರೈಲು ನಿಲ್ದಾಣಗಳಿಗಿಂತ ಬಾಗೇಶಪುರ ನಿಲ್ದಾಣ ಆಕರ್ಷಕವಾಗಿದೆ. ಇಲ್ಲಿನ ವಾಸ್ತುಶಿಲ್ಪ ವೀಕ್ಷಣೆಗೆ ಸಾಕಷ್ಟು ಪ್ರವಾಸಿಗರು ಬರುತ್ತಾರೆ.

ಅರ್ಥಪೂರ್ಣ ಸ್ಟೇಷನ್ ಮಹೋತ್ಸವ

ಬಾಗೇಶಪುರ ರೈಲು ನಿಲ್ದಾಣಕ್ಕೆ 65 ವರ್ಷ ಪೂರ್ಣಗೊಂಡಿರುವ ಹಿನ್ನಲೆಯಲ್ಲಿ ಶುಕ್ರವಾರ ಸ್ಟೇಷನ್ ಮಹೋತ್ಸವ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಖಾಧಿಕಾರಿ, ಡಿಆರ್‌ಯುಸಿಸಿ ಸದಸ್ಯರು, ಸ್ಥಳೀಯ ಚುನಾಯಿತ ಪ್ರತಿನಿಧಿಗಳು, ರೈಲ್ವೆ ಸಿಬ್ಬಂದಿ ಮತ್ತು ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರು ಉಪಸ್ಥಿತರಿದ್ದರು.

ನಿವೃತ್ತ ರೈಲ್ವೆ ನೌಕರ ಗೋವಿಂದ ಗೌಡ ಮತ್ತು ದೂರದರ್ಶಕ ಪ್ರದರ್ಶನಕ್ಕಾಗಿ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್, ಏಷಿಯನ್ ಬುಕ್ ಆಫ್ ರೆಕಾರ್ಡ್ಸ್ ಪ್ರಶಸ್ತಿಗೆ ಭಾಜನರಾದ ವಿದ್ಯಾರ್ಥಿ ಬಿ.ಎಲ್.ಗಗನ್ ಅವರನ್ನು ಗೌರವಿಸಲಾಯಿತು. ಪ್ರೌಢಶಾಲೆಯ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ ಅಚ್ಚುಕಟ್ಟಾಗಿ ಮೂಡಿಬಂತು.

ಕಾಫಿ ಧಾರಣೆ : ಸಮಾನಾಂತರ ಕಾಯ್ದುಕೊಂಡ ಅರೇಬಿಕಾ

ರೋಬಸ್ಟಾ ಧಾರಣೆಯಲ್ಲಿ ಏರಿಳಿತ : ಬೆಲೆ ಏರಿಕೆ ನಿರೀಕ್ಷೆಯಲ್ಲಿ ಬೆಳೆಗಾರರು

• ಪ್ರಜೋದಯ ವರದಿ

ಹಾಸನ: ಕಾಫಿ ಧಾರಣೆ ಪ್ರಸಕ್ತ ವರ್ಷದಲ್ಲೂ ಸಮಾನಾಂತರ ಕಾಯ್ದುಕೊಂಡು ಏರಿಕೆ ಕಾಣುತ್ತಲೇ ಸಾಗುತ್ತಿದೆ. ಕಳೆದ ವರ್ಷ ಅರೇಬಿಕಾ ಕಾಫಿ ಒಂದು ಚೀಲ (50 ಕೆ.ಜಿ) 30 ಸಾವಿರ ರೂ.ಗೆ ತಲುಪಿತ್ತು. ಈ ವರ್ಷ 28,500 ರೂ. ಸಿಗುತ್ತಿದೆ. ರೋಬಸ್ಟಾ ಪಾರ್ಚ್‌ಮೆಂಟ್‌ಗೆ ಕಳೆದ ವರ್ಷ 24,000 ರೂ. ಸಿಕ್ಕಿತ್ತು. ಆದರೆ, ಈ ವರ್ಷ 18 ಸಾವಿರ ರೂ. ಸಿಗುತ್ತಿದ್ದು, ಬೆಲೆ ಏರಿಕೆ ನಿರೀಕ್ಷೆಯಲ್ಲಿ ಬೆಳೆಗಾರರಿದ್ದಾರೆ.

ಜಿಲ್ಲೆಯಲ್ಲಿ ಕಾಫಿ ವಹಿವಾಟು ಜನವರಿ ತಿಂಗಳಿನಿಂದ ಮೇ ತಿಂಗಳ ವರೆಗೂ ದೊಡ್ಡಮಟ್ಟದಲ್ಲಿ ನಡೆಯುವುದರಿಂದ ಈ ವರ್ಷವೂ ಅರೇಬಿಕಾ ಕಾಫಿ ಧಾರಣೆ 30 ಸಾವಿರ ರೂ. ಮೇಲ್ಪಟ್ಟು ಸಿಗುವ ನಿರೀಕ್ಷೆಯಲ್ಲಿರುವ ಬೆಳೆಗಾರರು ಕಾಫಿಯನ್ನು ಮಾರಾಟ ಮಾಡದೆ ಸಂಗ್ರಹಿಸಿಟ್ಟು ಕೊಳ್ಳಲು ಮುಂದಾಗಿದ್ದಾರೆ.

2025-ಜನವರಿ ಮೊದಲ ವಾರ

ದಲ್ಲಿ ಅರೇಬಿಕಾ ಪಾರ್ಚ್‌ಮೆಂಟ್-22,500ರೂ., ಅರೇಬಿಕಾ ಚೆರಿ-12,200ರೂ., ರೋಬಸ್ಟಾ ಪಾರ್ಚ್‌ಮೆಂಟ್-19,600ರೂ., ರೋಬಸ್ಟಾ ಚೆರಿ- 10,750 ಇತ್ತು. ಫೆಬ್ರವರಿ ಮೊದಲ ವಾರದ ಅಂತ್ಯಕ್ಕೆ ಅರೇಬಿಕಾ ಪಾರ್ಚ್‌ಮೆಂಟ್- 28,000ರೂ., ಅರೇಬಿಕಾ ಚೆರಿ- 16,000ರೂ. ರೋಬಸ್ಟಾ ಪಾರ್ಚ್‌ಮೆಂಟ್-24,000ರೂ., ರೋಬಸ್ಟಾ ಚೆರಿ - 13,000ರೂ.ಗೆ ತಲುಪಿತ್ತು. ಆದರೆ, ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಾಫಿ ಧಾರಣೆ ಊಹಿಸಲಾಗದ ಮಟ್ಟಕ್ಕೆ ಏರುಗತಿಯಲ್ಲೇ ಸಾಗಿದ ಪರಿಣಾಮ ಫೆಬ್ರವರಿ ಎರಡನೇ ವಾರದ ಪ್ರಾರಂಭದಲ್ಲೇ ಅರೇಬಿಕಾ ಪಾರ್ಚ್‌ಮೆಂಟ್ ಬೆಲೆ ಒಂದು ಚೀಲಕ್ಕೆ ಬರೋಬ್ಬರಿ 30 ಸಾವಿರ ರೂ. ಗಡಿದಾಟಿತ್ತು. ಅದೇ ರೀತಿ ರೋಬಸ್ಟಾ ಪಾರ್ಚ್‌ಮೆಂಟ್ ಕೂಡ 24,500ರೂ.ಗೆ ಮಾರಾಟವಾಗಿತ್ತು. ಒಂದು ಮೂಟೆಗೆ 25 ಸಾವಿರ ರೂ. ಐತಿಹಾಸಿಕ ಬೆಲೆ ಗರಿಷ್ಠ ಬೆಲೆ ಎಂದು ಭಾವಿಸಿದ್ದ ಸಂದರ್ಭದಲ್ಲಿ ಏಕಾಏಕಿ 30 ಸಾವಿರ ರೂ.ಗೆ ಜಿಗಿತ ಕಂಡಿತ್ತು. ಆದೇ ರೀತಿ 2026ರಲ್ಲೂ ಬೆಲೆ ಏರಿಕೆಯನ್ನು ಕಾಫಿ ಬೆಳೆಗಾರರು ಎದುರು ನೋಡುತ್ತಿದ್ದಾರೆ.

(ಶುಕ್ರವಾರದ ಕಾ

ನೋಡಲು ಚಂದ, ಆದರೆ ರೈತರಿಗೆ ಕಷ್ಟ!

» ಹಕ್ಕಲಿನ ಅಂಚಿನಲ್ಲೋ, ಹಾಡಿಯ ಮಧ್ಯದಲ್ಲೋ ಓಡಾಡುವ ಕಾಡುಕೋಳಿಗಳನ್ನು, ಇನ್ನೂ ಚಿಕ್ಕ ಗಾತ್ರದ ಚಿಟ್‌ಕೋಳಿಗಳನ್ನು ನೋಡಿದ್ದುಂಟು. ಮಳೆಗಾಲದಲ್ಲಿ ದೊಡ್ಡದಾಗಿ ಸದ್ದು ಮಾಡುತ್ತಾ ಕೂಗುತ್ತಿದ್ದ ವಾಂಟಕೋಳಿಗಳನ್ನು ನೋಡಿದ್ದು ಹಲವು ಬಾರಿ; ಟಿಟ್ಟಿಭ, ಗೂಬೆ, ನೆತ್ತಿಂಗ ಇವೆಲ್ಲಾ ನಮ್ಮ ಹಳ್ಳಿಯಲ್ಲಿ ಸಾಮಾನ್ಯ ಮತ್ತು ಆಗಾಗ ಕಾಣಿಸುತ್ತಿದ್ದವು.



ನಮ್ಮ ಹಳ್ಳಿಯ ಜನರಿಗೆ ಅಪರೂಪ ಎನಿಸಿದ್ದ ನವಿಲುಗಳು ಇಂದು ತೀರಾ ಸಾಮಾನ್ಯ ಎನಿಸಿದ್ದು ಮಾತ್ರ ಬೆರಗಿನ ವಿಚಾರ. ಜತೆಗೆ, ಅವುಗಳ ಕಾಟದಿಂದ, ಕೃಷಿಕರು ಬೇಸತ್ತು ಹೋಗಿದ್ದು ಸಹ ನಿಜ. ಭತ್ತ, ಬಸಳೆ, ತರಕಾರಿ ಗಿಡಗಳನ್ನು ಅವು ಕೆದಕಿ, ನೆಲವನ್ನು ಬಗೆದು ಹಾಳುಮಾಡುವುದರಿಂದಾಗಿ, ನವಿಲುಗಳು ನೋಡಲು ಚಂದವಾದರೂ, ಕೃಷಿಕರಿಗೆ ಅವನ್ನು ಕಂಡರೆ ಅಷ್ಟಕ್ಕಷ್ಟೇ.

ನಮ್ಮ ಹಳ್ಳಿಯ ಮನೆಯಲ್ಲಿ ಕುಳಿತರೆ, ಬೆಳಗಿನ ಹೊತ್ತು ಕೇಳಿ ಬರುವ ದೀರ್ಘವಾದ ಕೂಗು ಎಂದರೆ, ನವಿಲುಗಳ ಕೇಕೆ! ಹಾಡಿ, ಹಕ್ಕಲುಗಳ ನಡುವೆ, ಗದ್ದೆ ಬೈಲಿನ ಪಕ್ಕದ ಪೊದೆಗಳ ಹಿಂದೆ ಓಡಾಡುವ ನವಿಲುಗಳು, ಆಗಾಗ ದನಿ ಎತ್ತರಿಸಿ ಕೂಗುವುದುಂಟು. ಬಹು ದೂರದ ತನಕ ಕೇಳಿ ಬರುವ ಆ ದನಿ, ನಮ್ಮ ಹಳ್ಳಿಯವರಿಗೆ ಚಿರಪರಿಚಿತ ಏನಲ್ಲ! ಏಕೆಂದರೆ, ಕೆಲವೇ ವರ್ಷಗಳ ಹಿಂದೆ ನಮ್ಮೂರಲ್ಲಿ ನವಿಲುಗಳಿರಲಿಲ್ಲ!

ಸುಮಾರು 1990ರ ದಶಕದ ತನಕ, ಮಲೆನಾಡಿನಂತಿರುವ ಆದರೆ ಕರಾವಳಿಯ ಭಾಗವಾದ ನಮ್ಮ ಹಳ್ಳಿಯ ಸುತ್ತಮುತ್ತಲಿನ ಕಾಡುಗಳು, ಗುಡ್ಡಗಳು ಹುಲ್ಲುಗಾವಲುಗಳು, ಗದ್ದೆಯಂಚಿನಲ್ಲಿ ನವಿಲುಗಳು ಕಾಣಿಸುತ್ತಿರಲಿಲ್ಲ. ಇಷ್ಟು ಖಚಿತವಾಗಿ ಹೇಗೆ ಹೇಳುತ್ತಿದ್ದೇನೆಂದರೆ, ನಾವು ಅಂದು ಪ್ರತಿದಿನ ಶಾಲೆಗೆ ಹೋಗುತ್ತಿದ್ದುದು, ಹಾಡಿ ಗುಡ್ಡಗಳ ಮಧ್ಯದ ದಾರಿಯಲ್ಲಿ, ಅದರಲ್ಲೂ ನಡೆದುಕೊಂಡೇ! ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿಗೆ ಹೋಗಲು ನಮಗೆಲ್ಲಾ ಪ್ರತಿದಿನ ಕನಿಷ್ಠ 5 ರಿಂದ 10 ಕಿ.ಮೀ. ದೂರದ ನಡಿಗೆ. ಆ ದಾರಿಯು ಹಾಡಿ, ಹಕ್ಕಲು, ಗುಡ್ಡ, ಕಾಡು, ಮಕ್ಕಿ ಗದ್ದೆ, ಬೈಲು ಗದ್ದೆ, ತೋಡು, ತೋಟಗಳ ನಡುವೆ ಸಾಗುತ್ತಿತ್ತು.

ಅಲ್ಲಿ ವಾಸಿಸಿದ್ದ ಬಹುಪಾಲು ಹಕ್ಕಿಗಳು, ಉರಗಗಳು, ಉಭಯಜೀವಿಗಳು, ಕೀಟಗಳು, ಹಾತೆಗಳು, ಹಾರುವ ಓತಿ ಮತ್ತು ಇತರ ಸಣ್ಣಪ್ರಾಣಿ ಜೀವಿಗಳು ನನಗೆ ಪರಿಚಿತ. ನಮ್ಮ ಪ್ರತಿದಿನದ ಶಾಲಾ ದಾರಿಯ ಪಕ್ಕದಲ್ಲಿದ್ದ ಒಂದು ಪುಟ್ಟ ಅಡಕೆ ತೋಟದಲ್ಲಿ ಹಾರುವ ಓತಿಗಳನ್ನು ಹಲವು ಬಾರಿ ಕಂಡಿದ್ದೆ.

ಹಕ್ಕಲಿನ ಅಂಚಿನಲ್ಲೋ, ಹಾಡಿಯ ಮಧ್ಯದಲ್ಲೋ ಓಡಾಡುವ ಕಾಡುಕೋಳಿಗಳನ್ನು, ಇನ್ನೂ ಚಿಕ್ಕ ಗಾತ್ರದ ಚಿಟ್‌ಕೋಳಿಗಳನ್ನು ನೋಡಿದ್ದುಂಟು. ಮಳೆಗಾಲದಲ್ಲಿ ದೊಡ್ಡದಾಗಿ ಸದ್ದು ಮಾಡುತ್ತಾ ಕೂಗುತ್ತಿದ್ದ ವಾಂಟಕೋಳಿಗಳನ್ನು ನೋಡಿದ್ದು ಹಲವು ಬಾರಿ; ಟಿಟ್ಟಿಭ, ಗೂಬೆ, ನೆತ್ತಿಂಗ ಇವೆಲ್ಲಾ ನಮ್ಮ ಹಳ್ಳಿಯಲ್ಲಿ ಸಾಮಾನ್ಯ ಮತ್ತು ಆಗಾಗ ಕಾಣಿಸುತ್ತಿದ್ದವು.

ಆದರೆ ಅಲ್ಲಿ ಆಗ ನವಿಲುಗಳಿರಲಿಲ್ಲ. ನವಿಲು ಸಾಮಾನ್ಯವಾಗಿ ಬಯಲು ಪ್ರದೇಶಗಳಲ್ಲಿ, ಒಣ ಭೂಮಿಯಲ್ಲಿ, ಮಳೆ ಕಡಿಮೆಯಿರುವ ಪ್ರದೇಶಗಳಲ್ಲಿ ವಾಸಿಸುವ ಹಕ್ಕಿ. ನಮ್ಮ ಹಳ್ಳಿಯು ಕಾಡುಗಳಿಂದ ಸುತ್ತುವರಿದ ಪ್ರದೇಶ, ಅದಕ್ಕೇ ಅಲ್ಲಿ ನವಿಲುಗಳಿಲ್ಲ ಎಂಬ ಭಾವನೆ ನಮ್ಮದು.

ನಾವು ಶಾಲೆ ಮಕ್ಕಳು ನವಿಲುಗರಿಗಳನ್ನು ಆಗಾಗ ಅದೆಲ್ಲಿಂದಲೋ ಸಂಪಾದಿಸಿ, ಪುಸ್ತಕದ ನಡುವೆ ಇಟ್ಟು ಅದು ಮರಿ ಹಾಕಿದೆಯೆ ಎಂದು ಪರೀಕ್ಷಿಸಿದ್ದುಂಟು. ಚಿತ್ರಗಳಲ್ಲಿ, ನವಿಲನ್ನು ಕಂಡಿದ್ದುಂಟು; ಯಕ್ಷಗಾನದಲ್ಲಿ ನವಿಲು ನರ್ತನ, ಶಾಲಾ ಮಕ್ಕಳ ನವಿಲು ನರ್ತನ ನೋಡಿದ್ದುಂಟು; ಬಿಟ್ಟರೆ, ನಿಜ ನವಿಲಿನ ನೋಟ ನಮಗೆ ದೊರಕಿರಲಿಲ್ಲ. ನವಿಲು ಎಂದರೆ ಬಹು ದೂರದ ಊರುಗಳಲ್ಲಿ ವಾಸಿಸುವ ಹಕ್ಕಿ ಎಂದೇ ನಮ್ಮ ಭಾವನೆಯಾಗಿತ್ತು.

ನಂತರ, ಕಾಲೇಜು ವಿದ್ಯಾಭ್ಯಾಸಕ್ಕೆ ಹೋದಾಗ, ಕೊಲ್ಲೂರು ಸನಿಹದ ಜಡ್ಕಲ್ ಎಂಬ ಊರಿನ ಹತ್ತಿರದ ಒಬ್ಬ ಸಹಪಾಠಿಯ ಪರಿಚಯವಾಯಿತು. ಮಾತಿನ ಮಧ್ಯೆ, ನಮ್ಮ ಹಳ್ಳಿಯಲ್ಲಿ ನವಿಲುಗಳಿವೆ ಎಂದು ಆತ ಹೇಳಿದಾಗ, ನನಗಂತೂ ಬೆರಗು, ಆಚ್ಚರಿ! ಅವರ ಗದ್ದೆಗಳ ಸುತ್ತಮುತ್ತ ನವಿಲುಗಳು ಓಡಾಡುತ್ತವೆ, ನಮಗೆಲ್ಲಾ ಕಾಣಿಸುತ್ತವೆ ಎಂದು ಆತ ಹೇಳಿದಾಗ, ನವಿಲನ್ನು ನೋಡುವ ಆಸೆಯಾಯಿತು.

ಒಂದು ದಿನ ನಿಮ್ಮೂರಿಗೆ ಬರುತ್ತೇನೆ; ಶನಿವಾರ ಕಾಲೇಜು ಮುಗಿಸಿ ಹೋಗುವಾ. ಆಗದಾ? ಆಗ ನವಿಲು ತೋರಿಸುತ್ತೀಯಾ? ಎಂದು ಕೇಳಿದ್ದೆ. ಆತ ಹೂಂ, ಖಂಡಿತಾ ಎಂದಿದ್ದ. ಆದರೆ ನವಿಲುಗಳನ್ನು ನೋಡಲು ನಾನು ಆಗ ಜಡ್ಕಲ್ ಎಂಬ ಹಳ್ಳಿಗೆ ಹೋಗಲಿಲ್ಲ, ಬಿಡಿ. ಅದು ಬೇರೆ ವಿಚಾರ. ನಮ್ಮ ಹಳ್ಳಿಯ ಜನರಿಗೆ ಇಷ್ಟು ಅಪರೂಪ ಎನಿಸಿದ್ದ ನವಿಲುಗಳು, ಇಂದು ತೀರಾ ಸಾಮಾನ್ಯ ಎನಿಸಿದ್ದು ಮಾತ್ರ ಮತ್ತೊಂದು ಬೆರಗಿನ ವಿಚಾರ.

ಜತೆಗೆ, ಅವುಗಳ ಕಾಟದಿಂದ, ಕೃಷಿಕರು, ರೈತರು ಸಣ್ಣಗೆ ಬೇಸತ್ತು ಹೋಗಿದ್ದು ಸಹ ನಿಜ. ಭತ್ತ, ಸಳೆ, ತರಕಾರಿ ಗಿಡಗಳನ್ನು ಅವು ಕೆದಕಿ, ನೆಲವನ್ನು ಬಗೆದು ಹಾಳು ಮಾಡುವುದರಿಂದಾಗಿ, ನವಿಲುಗಳು ನೋಡಲು ಚಂದವಾದರೂ, ಕೃಷಿಕರಿಗೆ ಅವುಗಳನ್ನು ಕಂಡರೆ ಅಷ್ಟಕ್ಕಷ್ಟೇ.

1970-80ರ ದಶಕದಲ್ಲಿ, ಕರಾವಳಿ ಮತ್ತು ಮಲೆನಾಡಿನ ಪ್ರದೇಶಗಳಲ್ಲಿ ನವಿಲು ಬಹಳ ಅಪರೂಪದ ಪಕ್ಷಿ. ಆದರೆ, ಈಗ 2-3 ದಶಕಗಳಿಂದ ನವಿಲುಗಳ ವಾಸಸ್ಥಳ, ವ್ಯಾಪ್ತಿ ಬದಲಾಗಿದೆ. ನಮ್ಮೂರಿನ ಸರಹದ್ದಿನಲ್ಲಿ, ಸುತ್ತಮುತ್ತಲಿನ ಹಳ್ಳಿಗಳಲ್ಲಿ ಇಂದು ಅಕ್ಷರಶಃ ನೂರಾರು ನವಿಲುಗಳಿವೆ!

ಗದ್ದೆಯಂಚಿನ ಪೊದೆಗಳಲ್ಲಿ ಸಂಚರಿಸುತ್ತಾ, ಅಲ್ಲೇ ಮೊಟ್ಟೆಯಿಟ್ಟು ಮರಿಗಳನ್ನು ಬೆಳೆಸಿ, ತನ್ನ ಹಿಂದೆ ನಾಲ್ಕು ಮರಿಗಳನ್ನು ಕರೆದುಕೊಂಡು ಹೋಗುವ ತಾಯಿ ನವಿಲಿನ ದೃಶ್ಯ ಇಂದು ನಮ್ಮೂರಿನಲ್ಲಿ ಸಾಮಾನ್ಯ. ಈಚಿನ ವರ್ಷಗಳಲ್ಲಿ ನಮ್ಮ ರಾಜ್ಯದ ಕರಾವಳಿಯುದ್ದಕ್ಕೂ ನವಿಲುಗಳೂ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿವೆ. ನಮ್ಮ ಹಳ್ಳಿ ಮನೆಯ ಎದುರಿನ ಗದ್ದೆಯಲ್ಲಿ ನವಿಲುಗಳ ಓಡಾಟ ಆಗಾಗ ಇದ್ದೇ ಇರುತ್ತದೆ; ಭತ್ತದ ಬೆಳೆ ಬಂದಾಗ, ಕುಯ್ಲಿನ ಸಮಯದಲ್ಲಿ ಅವುಗಳ ಚಟುವಟಿಕೆ ಜಾಸ್ತಿ.

ಮುಂಗಾರು ಮೋಡಗಳು ಇರಲಿ ಬಿಡಲಿ, ಗಂಡು ನವಿಲುಗಳು ಆಗಾಗ ತಮ್ಮ ಗರಿಬಿಚ್ಚಿ ಸುಂದರವಾಗಿ ನರ್ತಿಸುವುದು ಸಹ ಸಾಮಾನ್ಯ. ಈಗ ನಮ್ಮ ಮನೆಯಲ್ಲಿ ಕುಳಿತೇ, ನವಿಲು ನರ್ತನ ನೋಡುವ ಅವಕಾಶವಿದೆ!

1980ರ ದಶಕದ ತನಕ ಆ ಪ್ರದೇಶದಲ್ಲಿ ಇಲ್ಲದ ನವಿಲುಗಳು ಇಂದೇಕೆ ಅಲ್ಲಿ ಮನೆಮಾಡಿ ಕೊಂಡಿವೆ? ನವಿಲಿನ ನರ್ತನ ಚಂದ; ಜತೆಗೆ ಅದು ಷಣ್ಮುಖನ ವಾಹನ. ಆದರೆ, ನಮ್ಮೂರಿನ ಕೃಷಿಕರಿಗೆ ನವಿಲು ಎಂದರೆ ಈಗಾಗಲೇ ಅಲರ್ಜಿ ಶುರುವಾಗಿದೆ; ಇನ್ನು ಕೆಲವು ವರ್ಷಗಳಲ್ಲಿ, ಗದ್ದೆಗಳಲ್ಲಿ ನವಿಲನ್ನು ಕಂಡರೆ ಅವರಿಗೆ ಚಳಿಜ್ವರ ಬರಬಹುದು!

ಏಕೆಂದರೆ, ಕಾಡುಹಂದಿ ಮತ್ತು ಮಂಗಗಳ ನಂತರ, ನಮ್ಮೂರಿನ ಕೃಷಿಕರಿಗೆ ಇಂದು ಅತಿ ಹೆಚ್ಚು ಕಾಟ ಕೊಡುವ ವನ್ಯಜೀವಿ ಎಂದರೆ ನವಿಲು! ನಗರಗಳಲ್ಲಿರುವವರಿಗೆ, ಪೇಟೆಯ ಮಂದಿಗೆ ಇದನ್ನು ಕೇಳಿ ಆಚ್ಚರಿ ಎನಿಸಬಹುದು. ಗರಿಬಿಚ್ಚಿ ನರ್ತಿಸುವ ನವಿಲಿನ ನೋಟ ಮಾತ್ರ ಹೆಚ್ಚಿನವರಿಗೆ ಪರಿಚಿತ; ನವಿಲು ಕುಣಿದಾವೆ ನೋಡೆ ಎಂಬ ಹಾಡು ಪರಿಚಿತ.

ಗರಿಬಿಚ್ಚು ಗರಿಬಿಚ್ಚು ಗರಿಬಿಚ್ಚು ನವಿಲೆ ಎಂಬ ಗೀತೆಯ ಗುನುಗು ಪರಿಚಿತ. ಶಾಲಾ ಮಕ್ಕಳು ಬಣ್ಣ ಬಣ್ಣದ ಸಾವಿರ ಕಣ್ಣಿನ ನವಿಲುಗರಿಗಳ ಹೊದಿಕೆಯನ್ನು ಹೊದ್ದು, ಗುಂಪಾಗಿ ನರ್ತಿಸುವ ದೃಶ್ಯ ಪರಿಚಿತ. ಆದರೆ, ಕೃಷಿಕರಿಗೆ ನವಿಲು ಒಂದು ಪೀಡೆ ಎಂಬ ವಿಚಾರ ಹೆಚ್ಚಿನವರಿಗೆ ಗೊತ್ತಿಲ್ಲ!

ಭತ್ತದ ಬೆಳೆ ಇನ್ನೇನು ಕೈಗೆ ಬರಬೇಕು ಎನ್ನುವಷ್ಟರಲ್ಲಿ ಹತ್ತೆಂಟು ನವಿಲುಗಳು ಆ ಗದ್ದೆಯ ಕಡೆ ಬಂದವೆಂದರೆ, ಕೃಷಿಕರಿಗೆ ತಲೆನೋವು. ಕೆಲವರಿಗೆ ಅವುಗಳನ್ನು ಓಡಿಸುವುದೇ ಕೆಲಸ! ಬೆಳೆದ ಭತ್ತದ ತೆನೆಗಳನ್ನು ಇಡಿಯಾಗಿ ಸ್ವಾಹಾ ಮಾಡುವ ನವಿಲುಗಳು, ಅತ್ತಿತ್ತ ಓಡಾಡಿ, ಬರಬರ ಹಾರಿ, ಇನ್ನೊಂದಿಷ್ಟು ಭತ್ತ ಕೆಳಗೆ ಉದುರುವಂತೆ ಮಾಡುತ್ತವೆ. ಇದರಿಂದಾಗಿ ಶೇ.10ರಷ್ಟು ಭತ್ತದ -ಸಲು ಹಾನಿಯಾಗುತ್ತದೆ ಎಂದು ಒಂದು ಅಂದಾಜು.ಮಂಗಳೂರು ಸನಿಹದಲ್ಲಿ, ಮನೆಯ ಹಿತ್ತಲಿನಲ್ಲಿ ಬೆಳೆಸಿದ ತೊಂಡೆಕಾಯಿಗಳನ್ನು ನವಿಲುಗಳು ತಿಂದುಹಾಕುತ್ತವೆ ಎಂದು ಸ್ನೇಹಿತರೊಬ್ಬರು ಹೇಳಿದರು. ಕುಂದಾಪುರ ಸನಿಹದ ಕೆಲವು ಮನೆಗಳ ಅಂಗಳಕ್ಕೆ ಬಂದು, ಕೋಳಿಗಳಿಗೆಂದು ಹಾಕಿದ್ದ ಆಹಾರವನ್ನು ನವಿಲುಗಳೇ ಕಬಳಿಸುತ್ತವಂತೆ!

ಹೆಚ್ಚಿನ ಕೃಷಿಕರಿಗೆ ಈಗ ತಮ್ಮ ಗದ್ದೆಗಳ ಹತ್ತಿರ ಸುಳಿದಾಡುವ ನವಿಲುಗಳ ಬಣ್ಣ ನೋಡುವ ಖುಷಿಯಿಲ್ಲ. ಅವು ಮಿಡತೆಗಳನ್ನು, ಕೀಟಗಳನ್ನು ಸಹ ತಿನ್ನುತ್ತವೆ ಎಂದರೂ, ಅವುಗಳ ಕಾಟವು ಅವರಿಗೆ ರೇಜಿಗೆ ಹುಟ್ಟಿಸಿದೆ. ತೀರ್ಥಹಳ್ಳಿ ಸುತ್ತಲಿನ ಹಲವು ಕೃಷಿಕರು ಈಚಿನ ವರ್ಷಗಳಲ್ಲಿ ಹೆಚ್ಚಳಗೊಂಡ ನವಿಲುಗಳ ಸಂಖ್ಯೆಯನ್ನು ಕಂಡು ವಿಸ್ಮಯಗೊಂಡಿದ್ದಾರೆ.

ನವಿಲುಗಳ ಸಂಖ್ಯೆ ಜಾಸ್ತಿಯಾಗಿರುವುದರಿಂದ, ಬೇರೆ ಬೇರೆ ಪಾರಿಸರಿಕ ಸಮಸ್ಯೆಗಳು ಉದ್ಭವಿಸ ಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ. ನಮ್ಮ ಹಳ್ಳಿಯ ಸುತ್ತಮುತ್ತ ನರಿಗಳ ಸಂಖ್ಯೆ ಕಡಿಮೆಯಾಗಿದ್ದರಿಂದ, ನವಿಲುಗಳ ಸಂಖ್ಯೆ ಹೆಚ್ಚಳಗೊಂಡಿದೆ ಎಂಬ ಊಹೆಯೂ ಇದೆ; ಇದರ ಕುರಿತು ಸಂಶೋಧನೆ ನಡೆಯಬೇಕಾಗಿದೆ.

ಜತೆಗೆ, ಅದೇಕೆ ಈಚಿನ ವರ್ಷಗಳಲ್ಲಿ ಈ ರೀತಿ ನವಿಲುಗಳ ಸಂಖ್ಯೆ ಹೆಚ್ಚಳಗೊಂಡಿದೆ ಎಂಬುದಕ್ಕೆ ಕಾರಣವನ್ನೂ ಗುರುತಿಸಬೇಕಾಗಿದೆ. ಕರಾವಳಿಯ ಕೆಲವು ಭಾಗಗಳಲ್ಲಿ ಮತ್ತು ಕೇರಳದಲ್ಲಿ ನವಿಲುಗಳ ಸಂಖ್ಯೆ ಅಧಿಕವಾಗಿದ್ದು, ಕೃಷಿಗೆ ತೊಂದರೆ ಕೊಡುವುದರಿಂದಾಗಿ, ಅವುಗಳ ಸಂಖ್ಯೆಯನ್ನು ಕಡಿಮೆಮಾಡಬೇಕು ಎಂಬ ವಾದವೂ ಇದೆ.

ಆದರೆ, ನಮ್ಮ ದೇಶದಲ್ಲಿ ನವಿಲಿಗೆ ಹಿಂಸೆ ಮಾಡುವಂತಿಲ್ಲ. ಇಲ್ಲಿನ ಕಾನೂನಿನ ಪ್ರಕಾರ ನವಿಲುಗಳು ವನ್ಯಜೀವಿ ಮತ್ತು ಕಾನೂನಿನ ರಕ್ಷಣೆಯಲ್ಲಿರುವ ಪಕ್ಷಿ. ಅದನ್ನು ಯಾರೂ ಬೇಟೆಯಾಡುವಂತಿಲ್ಲ; ಅದಕ್ಕೆ ವಿಷ ಉಣಿಸಿದರೆ ಅಪರಾಧವಾಗುತ್ತದೆ. ಜತೆಗೆ, ನವಿಲು ರಾಷ್ಟ್ರೀಯ ಪಕ್ಷಿ ಮತ್ತು ನಮ್ಮ ರಾಜ್ಯದ ಪಕ್ಷಿಯೂ ಹೌದು.

ನಮ್ಮ ರಾಜ್ಯದ ಉತ್ತರ ಭಾಗದ ಕೆಲವು ಜಿಲ್ಲೆಗಳಲ್ಲಿ ಬಹು ಹಿಂದಿನಿಂದಲೂ ನವಿಲುಗಳು ಹೇರಳವಾಗಿದ್ದವು. ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈಗ ಸಾಕಷ್ಟು ಸಂಖ್ಯೆಯಲ್ಲಿ ನವಿಲುಗಳಿವೆ. ಆದರೆ, ಇಲ್ಲೆಲ್ಲಾ ನವಿಲುಗಳಿಂದಾಗಿ ಕೃಷಿ ಚಟುವಟಿಕೆಗೆ ನಷ್ಟವಾಗುತ್ತಿದೆ ಎಂಬ ಚರ್ಚೆ ನಡೆದಂತಿಲ್ಲ. ನವಿಲುಗಳಿಂದ ತಮಗೆ ತೊಂದರೆಯಾಗುತ್ತಿದೆ ಎಂಬ ದೂರು ಸಾರ್ವತ್ರಿಕವಾಗಿಲ್ಲ.

ನವಿಲುಗಳ ಇತಿಹಾಸ, ವಾಸಸ್ಥಳ, ಅವು ಹರಡಿದ ರೀತಿ ಇವುಗಳನ್ನು ಹುಡುಕುತ್ತಾ ಹೋದರೆ ಹಲವು ಕುತೂಹಲಕಾರಿ ವಿಷಯಗಳು ಗಮನಕ್ಕೆ ಬರುತ್ತವೆ. ಜಗತ್ತಿನಲ್ಲಿ ಮೂರು ಪ್ರಭೇದದ ನವಿಲುಗಳಿವೆ. ಅವುಗಳ ಪೈಕಿ, ಆಫ್ರಿಕಾದ ಕಾಂಗೋ ನವಿಲು ಮತ್ತು ಇಂಡೋನೇಷಿಯನ್ ನವಿಲು-ಇವೆರಡೂ ಪ್ರಭೇದಗಳು ಅದಾಗಲೇ ಅವನತಿಯ ಹಾದಿ ಹಿಡಿದಿವೆ.

ಅಲ್ಲಿನ ಜನರು ನಿರಂತರವಾಗಿ ನವಿಲನ್ನು ಬೇಟೆಯಾಡಿ, ಅವುಗಳ ವಾಸಸ್ಥಳವನ್ನು ನಾಶ ಮಾಡಿದ್ದರಿಂದಾಗಿ, ಆ ಎರಡೂ ನವಿಲುಗಳ ಸಂಖ್ಯೆ ತೀರಾ ಕಡಿಮೆಯಾಗಿದೆ. ಇವೆರಡನ್ನು ಬಿಟ್ಟರೆ, ನಮ್ಮ ದೇಶದ ನವಿಲುಗಳು (ಇಂಡಿಯನ್ ಪೀಫೌಲ್) ದೇಶದ ಬಹುಭಾಗಗಳಲ್ಲಿ ಮತ್ತು ಶ್ರೀಲಂಕಾದಲ್ಲಿ ಸಾಕಷ್ಟು ಸಂಖ್ಯೆಯಲ್ಲಿವೆ. ಆದರೆ, ಮೊದಲು ಸಾಕಷ್ಟು ಸಂಖ್ಯೆಯಲ್ಲಿದ್ದ ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನವಿಲುಗಳು ನಿರ್ನಾಮವಾಗಿವೆ; ಪಾಕಿಸ್ತಾನದಲ್ಲಿ ಮೊದಲಿನಿಂದಲೂ ಇದ್ದ ನವಿಲುಗಳು ಇಂದು ಕ್ರಮೇಣ ಕಣ್ಮರೆಯಾಗುತ್ತಿವೆ.

ಪುರಾತನ ಕಾಲದಿಂದಲೂ ಸಾಂಸ್ಕೃತಿಕ ಮತ್ತು ಪೂಜ್ಯ ಭಾವನೆಯಿಂದ ನಮ್ಮ ಜನರು ನವಿಲಿಗೆ ನೀಡಿರುವ ರಕ್ಷಣೆಯಿಂದಾಗಿಯೇ, ಅವು ಇಂದು ನಮ್ಮ ದೇಶದಲ್ಲಿ ಸಾಕಷ್ಟು ಉಳಿದುಕೊಂಡಿವೆ ಎಂಬುದು ಸ್ಪಷ್ಟ. ಮತ್ತೊಂದು ವಿಶೇಷವೆಂದರೆ, ಪುರಾತನ ಕಾಲದಿಂದಲೂ ನಮ್ಮ ದೇಶದ ನವಿಲುಗಳು ವಿಶ್ವದಾದ್ಯಂತ ಪರಿಚಿತ. ಐತಿಹಾಸಿಕ ಮಯೂರ ಸಿಂಹಾಸನ ಜಗದ್ವಿಖ್ಯಾತ. ಯುರೋಪ್ ಪ್ರದೇಶದಲ್ಲಿ ನವಿಲು ಸಹಜವಾಗಿ ವಾಸಿಸದೇ ಇದ್ದರೂ, ಗ್ರೀಕ್ ಪೌರಾಣಿಕ ಕಥೆಗಳಲ್ಲಿ, ಯುರೋಪಿನ ಹಲವು ಕಥನಗಳಲ್ಲಿ ನವಿಲಿನ ವಿಚಾರ ಬರುತ್ತದೆ. ಸಿಂಧೂ ಕಣಿವೆಯ ನಾಗರಿಕತೆಯ ಚಿತ್ರಗಳಲ್ಲಿ ನವಿಲುಗಳಿವೆ. ಯೆಜ್ದಿ ಜನಾಂಗದವರಿಗೆ ನವಿಲು ಒಂದು ಪವಿತ್ರ ಪಕ್ಷಿ!

ಕೃಷ್ಣನ ಅಲಂಕಾರಕ್ಕೆ ನವಿಲುಗರಿ ಬೇಕು! ಷಣ್ಮುಖನ ವಾಹನವಾಗಿ ನವಿಲು ಇದೆ. ಇಂದು ಜಗತ್ತಿನ ಹಲವು ದೇಶಗಳಲ್ಲಿ ನಮ್ಮ ದೇಶದ ನವಿಲುಗಳೂ ತಮ್ಮ ಸಂತತಿಯನ್ನು ಮುಂದುವರಿಸಿವೆ ಎಂಬುದು ವಿಸ್ಮಯ ಹುಟ್ಟಿಸುತ್ತದೆ! ನವಿಲಿನ ಬಣ್ಣ ಬಣ್ಣದ ಗರಿಯ ಕುರಿತು, ಕಣ್ಣುಗಳ ಕುರಿತು ವಿಜ್ಞಾನಿಗಳು ಸಾಕಷ್ಟು ಜಿಜ್ಞಾಸೆ ನಡೆಸಿದ್ದಾರೆ; ನವಿಲುಗರಿಗಳ ಬಣ್ಣ, ಸ್ವರೂಪದ ಕುರಿತು ಚಾರ್ಲ್ಸ್ ಡಾರ್ವಿನ್ ಸಹ ತಲೆಕೆಡಿಸಿಕೊಂಡಿದ್ದುಂಟು.

ಪ್ರಧಾನವಾಗಿ ನಮ್ಮ ದೇಶದಲ್ಲಿ ಕಾಣಿಸುವ ಈ ಸುಂದರ ಹಕ್ಕಿಯು ಇಡೀ ಜಗತ್ತಿನಾದ್ಯಂತ ಸಕಾರಾತ್ಮಕವಾಗಿ ಪರಿಚಿತ ಗೊಂಡಿರುವುದೇ ವಿಶಿಷ್ಟ ವಿದ್ಯಮಾನ. ನಮ್ಮ ಹಳ್ಳಿಯಲ್ಲಿ ಹಿಂದೆ ಇಲ್ಲದೇ ಇದ್ದ ನವಿಲುಗಳು ಇಂದೇಕೆ ವ್ಯಾಪಕವಾಗಿ ಕಾಣಿಸಿಕೊಳ್ಳುತ್ತಿವೆ ಎಂದು ಹುಡುಕುತ್ತಾ ಹೋದಾಗ ಕಂಡು ಕೊಂಡ ವಿಚಾರಗಳಿವು.

ಜತೆಗೆ, ನಮ್ಮೂರಿನ ಕೃಷಿಕರಿಗೆ ಅವು ಪೀಡೆ ನೀಡುವ ಜೀವಿಗಳಾಗಿ ಕಾಣಿಸುತ್ತಿರುವುದು ಸಹ ಗಮನಿಸಬೇಕಾದ ಅಂಶ. ಸಾಕಷ್ಟು ಕಾಡನ್ನು, ಹಸಿರು ಪ್ರದೇಶಗಳನ್ನು ಹೊಂದಿರುವ ನಮ್ಮ ರಾಜ್ಯದ ಕರಾವಳಿ ಮತ್ತು ಕೇರಳದಲ್ಲಿ ಈಚಿನ ಒಂದೆರಡು ದಶಕಗಳಲ್ಲಿ ನವಿಲುಗಳೇಕೆ ಹೆಚ್ಚಳಗೊಂಡಿವೆ? ಪ್ರಧಾನವಾಗಿ ಬಯಲುನಾಡಿನ ಹಕ್ಕಿ ಗಳೇ ಎಂದು ಗುರುತಿಸಲಾಗಿದ್ದ ಇವು, ಮಲೆನಾಡಿನಲ್ಲೇಕೆ ತಮ್ಮ ವಾಸಸ್ಥಳವನ್ನ ಹುಡುಕಿಕೊಂಡವು? ನಮ್ಮ ಪರಿಸರದ ಸಮತೋಲನ ವ್ಯವಸ್ಥೆಯಲ್ಲಿ ಇನ್ನಿಲ್ಲದಂತೆ ಮೂಗು ತೂರಿಸುತ್ತಿರುವ ಆಧುನಿಕ ಮನುಷ್ಯನ ಕೈವಾಡವೇ ಇದಕ್ಕೆ ಕಾರಣವೇ? ಪರಿಸರ ಮತ್ತು ಇಕಾಲಜಿಯ ಸರಪಣಿಯ ಪ್ರಾಮುಖ್ಯದ ಹಿನ್ನೆಲೆಯಲ್ಲಿ, ಈ ವಿಚಾರದ ಮೂಲ ವನ್ನು ಹುಡುಕುವುದು ಅಗತ್ಯ ಎನಿಸಿದೆ.

– ಶಶಿಧರ ಹಾಲಾಡಿ

ನವಿಲಿನ ಗುನುಗು ಪರಿಚಿತ

- ಗರಿಬಿಚ್ಚು ಗರಿಬಿಚ್ಚು ಗರಿಬಿಚ್ಚು ನವಿಲೆ ಎಂಬ ಗೀತೆಯ ಗುನುಗು ಪರಿಚಿತ.
- ಶಾಲಾ ಮಕ್ಕಳು ಬಣ್ಣ ಬಣ್ಣದ ಸಾವಿರ ಕಣ್ಣಿನ ನವಿಲುಗರಿಗಳ ಹೊದಿಕೆಯನ್ನು ಹೊದ್ದು, ಗುಂಪಾಗಿ ನರ್ತಿಸುವ ದೃಶ್ಯ ಪರಿಚಿತ. ಆದರೆ, ಕೃಷಿಕರಿಗೆ ನವಿಲು ಒಂದು ಪೀಡೆ ಎಂಬ ವಿಚಾರ ಹೆಚ್ಚಿನವರಿಗೆ ಗೊತ್ತಿಲ್ಲ!
- ಭತ್ತದ ಬೆಳೆ ಇನ್ನೇನು ಕೈಗೆ ಬರಬ

ರಸ್ತೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಿ: ಡಿ.ಸಿ.

ಫುಟ್‌ಪಾತ್ ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಿ | ಪರವಾನಗಿ ಇಲ್ಲದೆ ವಾಹನ ಚಾಲನೆ ಬೇಡ

• ಪ್ರಜೋದಯ ವರದಿ

ಹಾಸನ: ಸಾರ್ವಜನಿಕರು ಸುಗಮವಾಗಿ ಸಂಚಾರ ಮಾಡಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ರಸ್ತೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲು ಜಿಲ್ಲಾಧಿಕಾರಿ ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪದೇ ಪದೇ ರಸ್ತೆ ಅಪಘಾತಗಳು ಸಂಭವಿಸುತ್ತಿರುವಂತಹ ಸ್ಥಳಗಳನ್ನು ಗುರುತಿಸಿ ಸಾರ್ವಜನಿಕರು ಎಚ್ಚರ ವಹಿಸಲು ಹಾಗೂ ಮಾಹಿತಿಗಾಗಿ ಫಲಕಗಳನ್ನು ಅಳವಡಿಸಲು ಸೂಚಿಸಿದರು.

ರಸ್ತೆ ಸುರಕ್ಷತಾ ಸಭೆಯನ್ನು ತಾಲ್ಲೂಕು ಮಟ್ಟದಲ್ಲಿಯೂ ನಡೆಸಿ ಸೂಕ್ತ ಕ್ರಮ ವಹಿಸುವಂತೆ ತಿಳಿಸಿದ ಅವರು, ಹೆಲ್ಮೆಟ್ ಕಡ್ಡಾಯವಾಗಿ ಧರಿಸಬೇಕು. ಈ ನಿಟ್ಟಿನಲ್ಲಿ ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನ ಮಾಡಬೇಕು. ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆಯುವ ಅಪಘಾತಗಳ ಬಗ್ಗೆ ಮಾಹಿತಿ ನೀಡಿ, ಈಗಾಗಲೇ ಆಗಿರುವ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿ ಎಚ್ಚರಿಕೆ ವಹಿಸಿ ಎಂದು ತಿಳಿಸಿದರು.

ರಸ್ತೆ ಅಪಘಾತಗಳು ಸಂಭವಿಸಿ ಸಾರ್ವಜನಿಕರ ಜೀವ ಕಳೆದುಕೊಳ್ಳುತ್ತಾರೆ. ಪ್ರತಿಯೊಬ್ಬರ ಜೀವ ಅಮೂಲ್ಯವಾದುದು ಅದನ್ನು ಉಳಿಸುವ ನಿಟ್ಟಿನಲ್ಲಿ ರಸ್ತೆ ಸುರಕ್ಷತೆಗೆ ಹೆಚ್ಚಿನ ಗಮನಹರಿಸಬೇಕು. ಪಾದಚಾರಿಗಳು ಓಡಾಡಲು ಇರುವ ಫುಟ್‌ಪಾತ್‌ನಲ್ಲಿ ವ್ಯಾಪಾರ ನಡೆಸುತ್ತಿದ್ದಾರೆ. ಪಾದಚಾರಿಗಳು ರಸ್ತೆಯಲ್ಲಿ ಸಂಚಾರ ಮಾಡುವುದರಿಂದ ಅಪಘಾತ ಸಂಭವಿಸುತ್ತಿವೆ ಹಿಟ್ ಅಂಡ್ ರನ್ ಪ್ರಕರಣಗಳು ನಡೆಯುತ್ತವೆ ಫುಟ್‌ಪಾತ್ ತೆರವುಗೊಳಿಸಲು ಸ್ಥಳೀಯ ಸಂಸ್ಥೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರು ರಸ್ತೆ ಬದಿಯಲ್ಲಿ ಕಸ ಹಾಕುತ್ತಾರೆ ಇದನ್ನು ತೆರವುಗೊಳಿಸಲು ಸಂಬಂಧಪಟ್ಟ ರಸ್ತೆ ನಿರ್ವಹಣೆ ಮಾಡುವವರೆ ತೆರವಿಗೆ ಕ್ರಮ ವಹಿಸಿ ರಸ್ತೆ ಸುರಕ್ಷತೆಗೆ ಆದ್ಯತೆ ನೀಡಿ ಎಂದರಲ್ಲದೆ, ರಸ್ತೆ ಬದಿಯಲ್ಲಿ ಕಸದ ರಾಶಿ ಕಂಡು ಬಂದಲ್ಲಿ ರಸ್ತೆ ಮಾಲೀಕರೆ ಜವಾಬ್ದಾರರು ಎಂದು ಎಚ್ಚರಿಸಿದರು.

ಸಿ.ಸಿ.ಕ್ಯಾಮರ ಅಳವಡಿಸುವುದು ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಟ್ರ್ಯಾಕ್ಟರ್‌ಗೆ ರಿಫ್ಲೆಕ್ಟರ್ ಅಳವಡಿಸಲು ಕ್ರಮ ಕೈಗೊಳ್ಳಲು ತಿಳಿಸಿದರಲ್ಲದೆ, ವಾಹನಗಳನ್ನು ವ್ಯವಸ್ಥಿತವಾಗಿ ನಿಲುಗಡೆಗೆ ಬೋರ್ಡ್ ಅಳವಡಿಸುವುದು ಹಾಗೂ ರಸ್ತೆಗಳಲ್ಲಿ ಸುಗಮ ಸಂಚಾರಕ್ಕೆ ಸೈನೇಜ್ ಬೋರ್ಡ್ ಹಾಕಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಶಾಲಾ ಕಾಲೇಜು ಮಕ್ಕಳಿಗೆ ಟ್ರಾಫಿಕ್ ಸಿಗ್ನಲ್ ಬಗ್ಗೆ ಅರಿವು ಮೂಡಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಚಾಲಕರಿಗೆ ಟ್ರಾಫಿಕ್ ಸಿಗ್ನಲ್ ಹಾಗೂ ರಸ್ತೆ ಸುರಕ್ಷತೆ ಕುರಿತು ಒಂದು ಪರೀಕ್ಷೆ ನಡೆಸಲಾಗುವುದು. ವಿಜೇತರಾದವರಿಗೆ ಜನವರಿ 26 ರಂದು ಬಹುಮಾನ ನೀಡಲಾಗುವುದು. ಈ ವರ್ಷದಲ್ಲಿ ಇದುವರೆಗೆ 2499 ಅಪಘಾತಗಳು ಸಂಭವಿಸಿದ್ದು, 426 ಮಂದಿ ಸಾವನ್ನಪ್ಪಿದ್ದಾರೆ. ಜನರ ಜೀವ ರಕ್ಷಣೆ ಹಾಗೂ ಸುರಕ್ಷತೆಗಾಗಿ ಹೆಚ್ಚಿನ ನಿಗಾ ವಹಿಸಬೇಕು. ವಾಣಿಜ್ಯ ಸಂಕೀರ್ಣ, ಕಲ್ಯಾಣ ಮಂಟಪಗಳಲ್ಲಿ ವಾಹನ ನಿಲುಗಡೆಗೆ ಸೂಕ್ತ ಸ್ಥಳಾವಕಾಶ ಇರಬೇಕು. ರಸ್ತೆ ಬದಿಯಲ್ಲಿ ವಾಹನ ನಿಲುಗಡೆ ಮಾಡುವುದರಿಂದ ಅಪಘಾತ ನಡೆಯಲು ಕಾರಣವಾಗುತ್ತಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ವಹಿಸುವಂತೆ ನಿರ್ದೇಶಿಸಿದರು.

ಪರವಾನಗಿ ಇಲ್ಲದೆ ವಾಹನ ಚಾಲನೆ ಮಾಡಬಾರದು ಎಂದ ಅವರು, ಪೋಷಕರು 18 ವರ್ಷ ದೊಳಗಿನ ಮಕ್ಕಳಿಗೆ ವಾಹನ ಚಾಲನೆ ಮಾಡಲು ನೀಡಬಾರದು. ಈ ನಿಟ್ಟಿನಲ್ಲಿ ಅರಿವು ಮೂಡಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರಲ್ಲದೆ, ಅರಸೀಕೆರೆಯ ಇಂಜಿನಿಯರಿಂಗ್ ಕಾಲೇಜು ಎದುರುಗಡೆ ಸ್ಪೀಡ್ ಬ್ರೇಕರ್ ಅಳವಡಿಸಲು ಡಿ.ಸಿ. ಸೂಚಿಸಿದರು.

ಕುರಿ, ಕೋಳಿ ತ್ಯಾಜ್ಯವನ್ನು ರಸ್ತೆ ಬದಿಯಲ್ಲಿ ಹಾಕುತ್ತಿರುವುದರಿಂದ ನಾಯಿಗಳು ಅದನ್ನು ತಿನ್ನಲು ಬರುತ್ತವೆ ವಾಹನಗಳಿಗೆ ಅಡ್ಡ ಬರುವುದರಿಂದ ಅಪಘಾತ ಸಂಭವಕ್ಕೆ ಕಾರಣವಾಗುತ್ತದೆ, ರಸ್ತೆಗಳ ಬದಿಯಲ್ಲಿ ತ್ಯಾಜ್ಯ ಹಾಕಬಾರದು, ಹಾಕಿದ್ದಲ್ಲಿ ತೆರವುಗೊಳಿಸುವ ಜವಾಬ್ದಾರಿ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸುವಂತೆ ತಿಳಿಸಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಎಡಿಸಿ ಮಂಜುನಾಥ್, ಜಿ.ಪಂ. ಉಪ ಕಾರ್ಯದರ್ಶಿ ಕೃಷ್ಣ ಮೂರ್ತಿ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ರಾಜು, ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಇನ್ನಿತರರಿದ್ದರು.

ಕ್ರೀಡಾಕೂಟ: ರಾಷ್ಟ್ರಮಟ್ಟಕ್ಕೆ ಆಯ್ಕೆ

• ಪ್ರಜೋದಯ ವರದಿ

ಆಲೂರು: ತಾಲ್ಲೂಕಿನ ಕದಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಟ್ಟದಹಳ್ಳಿ ಪ್ರೌಢಶಾಲೆಯ ವಿದ್ಯಾರ್ಥಿ ಸಂತೋಷ ರಾಜ್ಯಮಟ್ಟದ ಕ್ರೀಡಾ ಕೂಟದಲ್ಲಿ ದ್ವಿತೀಯ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಈ ವಿದ್ಯಾರ್ಥಿಗೆ ಆತನ ಪೋಷಕರು, ಕದಾಳು ಪ್ರೌಢಶಾಲೆಯ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ಮತ್ತು ಶಾಸಕ ಸಿಮೆಂಟ್ ಮಂಜು ನಾಥ್, ಕಬ್ಬಿನಳ್ಳಿ ಜಗದೀಶ್, ಕಿರಗಡಲು ಗ್ರಾಮದ ಮಧು, ಆಲೂರು ಸ್ಪೋರ್ಟ್ಸ್ ಕ್ಲಬ್ ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ಮತ್ತು ಇತರ ಸಂಘ-ಸಂಸ್ಥೆಗಳು ಸೇರಿದಂತೆ ಎಲ್ಲರೂ ಸಂತೋಷ್ ಅವರನ್ನು ಅಭಿನಂದಿಸಿ ಈ ವಿದ್ಯಾರ್ಥಿ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿ ಅಂತರ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿ ಇಡೀ ತಾಲ್ಲೂಕಿಗೆ ಕೀರ್ತಿ ತರಲೆಂದು ಶುಭ ಹಾರೈಸಿದ್ದಾರೆ.

ನ್ಯಾಯಾಧೀಶರ ಬೆದರಿಸುವ ಪ್ರಯತ್ನ ಬೇಡ

• ಪ್ರಜೋದಯ ವರದಿ

ನವದೆಹಲಿ: ತಮಿಳುನಾಡಿನ ತಿರುಪರನ ಕುಂದ್ರಂ ಬೆಟ್ಟದಲ್ಲಿ ದರ್ಗಾದ ಬಳಿ ಇರುವ ಕಲ್ಲಿನ ಕಂಬದ ಮೇಲೆ ಸಾಂಪ್ರದಾಯಿಕ ದೀಪ ಬೆಳಗಲು ಅನುಮತಿ ನೀಡಿದ್ದ ನ್ಯಾಯಾಧೀಶ ಜಿ.ಆರ್.ಸ್ವಾಮಿನಾಥನ್ ಅವರನ್ನು ಮಹಾಭಿಯೋಗ ಪ್ರಸ್ತಾವನೆ ಮೂಲಕ ತೆಗೆದು ಹಾಕಲು ವಿರೋಧ ಪಕ್ಷ ಪ್ರಯತ್ನಿಸುತ್ತಿದೆ. ಏತನ್ಮಧ್ಯೆ, ನಿವೃತ್ತ ಸುಪ್ರೀಂಕೋರ್ಟ್ ನ್ಯಾಯಧೀಶರು ಸೇರಿದಂತೆ 56 ಮಾಜಿ ನ್ಯಾಯ ಮೂರ್ತಿಗಳು ಮದ್ರಾಸ್ ಹೈಕೋರ್ಟ್ ನ್ಯಾಯಾಧೀಶರನ್ನು ಬೆಂಬಲಿಸಿ ಪತ್ರ ಬರೆದಿದ್ದಾರೆ.

ಇಂಡಿ ಕೂಟದ ಮಹಾಭಿಯೋಗ ಪ್ರಸ್ತಾವನೆಗೆ 56 ನ್ಯಾಯಾಧೀಶರು ಗಂಭೀರ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಮುಂದುವರಿಸಲು ಬಿಟ್ಟರೆ ಅದು ನಮ್ಮ ಪ್ರಜಾಪ್ರಭುತ್ವದ ಬೇರುಗಳನ್ನು ಮತ್ತು ನ್ಯಾಯಾಂಗದ ಸ್ವಾತಂತ್ರ್ಯವನ್ನು ನಾಶಪಡಿಸುತ್ತದೆ ಎಂದು ನ್ಯಾಯಾಧೀಶರು ಎಚ್ಚರಿಸಿದ್ದಾರೆ.

ಸಮಾಜದ ಒಂದು ನಿರ್ದಿಷ್ಟ ವರ್ಗದ ಸೈದ್ಧಾಂತಿಕ ಮತ್ತು ರಾಜಕೀಯ ನಿರೀಕ್ಷೆಗಳಿಗೆ ಅನುಗುಣವಾಗಿರದ ನ್ಯಾಯಾಧೀಶರನ್ನು ಬೆದರಿಸುವ ನಾಚಿಕೆಯಿಲ್ಲದ ಪ್ರಯತ್ನ ಎಂದು ನಿವೃತ್ತ ನ್ಯಾಯಾಧೀಶರು ಬಣ್ಣಿಸಿದ್ದಾರೆ. ನ್ಯಾಯಾಧೀಶರು ತಮ್ಮ ಪತ್ರದಲ್ಲಿ, ಮಾಜಿ ಪ್ರಧಾನಿ ಇಂದಿರಾ ಗಾಂಧಿ 1975ರಲ್ಲಿ ಘೋಷಿಸಿದ ತುರ್ತು ಪರಿಸ್ಥಿತಿಯನ್ನು ಸಹ ಉಲ್ಲೇಖಿಸಿದ್ದಾರೆ.

ಬೇಲೂರು ದೇವಸ್ಥಾನ ಮುಂಭಾಗದಲ್ಲಿ ಸ್ವಚ್ಛತೆ ಪರಿಶೀಲನೆ

ಅವ್ಯವಸ್ಥೆ ಕಂಡು ಆಕ್ರೋಶಗೊಂಡ ಪುರಸಭೆ ಅಧ್ಯಕ್ಷೆ ಉಷಾ

• ಪ್ರಜೋದಯ ವರದಿ

ಬೇಲೂರು: ಪಟ್ಟಣದ ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನ ಮುಂಭಾಗದಲ್ಲಿರುವ ಉಚಿತ ಶೌಚಾಲಯ, ಪಾರ್ಕಿಂಗ್ ನಿಲುಗಡೆ ಜಾಗ ಹಾಗೂ ತಿಂಡಿ ಗಾಡಿಗಳ ಪ್ರದೇಶ ಸೇರಿದಂತೆ ಪುರಸಭೆ ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಸ್ವಚ್ಛತೆ ಪರಿಶೀಲನೆ ನಡೆಸಿದರು.

ಮೊದಲಿಗೆ ಶೌಚಾಲಯ ಪರಿಶೀಲಿಸಿದ ಅವರು, ಅಲ್ಲಿ ಕಂಡು ಬಂದ ಗಬ್ಬಾದ ವಾಸನೆ, ಅಸ್ವಚ್ಛತೆ ಮತ್ತು ಸಂಜೆ ವೇಳೆ ಬೇಗನೆ ಬಾಗಿಲು ಹಾಕುತ್ತಿರುವ ನಿರ್ವಾಹಕರ ನಿರ್ಲಕ್ಷ್ಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ನಿರ್ವಾಹಕರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದ ಅವರು, ''ದೇವ ಸ್ಥಾನಕ್ಕೆ ಪ್ರತಿದಿನ ಸಾವಿರಾರು ಭಕ್ತರು ಬರುತ್ತಾರೆ. ಶೌಚಾಲಯದ ಸ್ಥಿತಿ ಪ್ರವಾಸಿಗರ ಅನುಭವಕ್ಕೆ ಕಳಂಕ ತರುತ್ತಿದೆ'' ಎಂದು ಆಕ್ರೋಶದಿಂದ ನುಡಿದರು.

ನಂತರ ತಿಂಡಿ ಗಾಡಿಗಳ ಸ್ವಚ್ಛತೆ ಮತ್ತು ಆಹಾರ ಗುಣಮಟ್ಟದ ಮೇಲೆ ಗಮನ ಹರಿಸಿದ ಅಧ್ಯಕ್ಷೆ, ವ್ಯಾಪಾರಿಗಳಿಗೆ ಶುಚಿತ್ವದ ಬಗ್ಗೆ ಜಾಗೃತಿ ವಹಿಸುವಂತೆ ಸೂಚಿಸಿದರಲ್ಲದೆ, ದೇವ ಸ್ಥಾನದ ಮುಂಭಾಗವನ್ನು ಗದ್ದಲವಾಗಿಸುತ್ತಿದ್ದ ವಾಹನ ಪಾರ್ಕಿಂಗ್ ವಿಷಯದಲ್ಲೂ ತಕ್ಷಣ ಕ್ರಮ ಕೈಗೊಂಡ ಅವರು, ದೇಗುಲ ಹಿಂಭಾಗ ನಿಗದಿತ ಸ್ಥಳದಲ್ಲೇ ವಾಹನಗಳನ್ನು ನಿಲ್ಲಿಸುವಂತೆ ಸೂಚನೆ ನೀಡಿದರು.

ಮುಂದಿನ ಎರಡು ತಿಂಗಳು ಶಾಲಾ ಮಕ್ಕಳು ಹಾಗೂ ಅಯ್ಯಪ್ಪಸ್ವಾಮಿ ಭಕ್ತರು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರಲಿದ್ದಾರೆ. ಈ ಕಾರಣ ಶೌಚಾಲಯ ತೆರೆಯುವ ಸಮಯ ರಾತ್ರಿ 9 ಗಂಟೆಯವರೆಗೆ ವಿಸ್ತರಿಸಬೇಕು. ಇದನ್ನು ಪಾಲಿಸದಿದ್ದರೆ ಕಠಿಣ ಕ್ರಮ ತಪ್ಪದೇ ಕೈಗೊಳ್ಳಲಾಗುತ್ತದೆ ಎಂದು ಪುರಸಭೆ ಅಧ್ಯಕ್ಷೆ ಎಚ್ಚರಿಕೆ ನೀಡಿದರು.

ನಂತರ ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಬಸವರಾಜು ಕಾಟಪ್ಪ ಸಿಗ್ಗಾವಿ ಅವರು, ಸ್ಥಳೀಯರಿಂದ ಬಂದ ದೂರುಗಳ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿದಾಗ ಹಲವು ಕಡೆ ಕಸ ಚೆಲ್ಲಾಡುತ್ತಿರುವುದು ಕಂಡು ಬಂದಿದೆ. ಕಸದ ಡಬ್ಬಿಗಳ ಕೊರತೆಯೂ ಕಂಡು ಬಂದಿದ್ದು ಮಾಧ್ಯಮಗಳಲ್ಲಿ ವಿಷಯ ಹೊರಬಿದ್ದ ನಂತರ ಅಧಿಕಾರಿಗಳು ಎಚ್ಚೆತ್ತುಕೊಂಡು ಹೊಸ ಕಸದ ಡಬ್ಬಿಗಳನ್ನು ಹಾಕಿದ್ದಾರೆ. ಮತ್ತೆ ಕಸ ಹರಡಿದರೆ ಮೇಲಾಧಿಕಾರಿಗಳಿಗೆ ವರದಿ ಕಳುಹಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯೆ ಮೀನಾಕ್ಷಿ ವೆಂಕಟೇಶ್, ಪ್ರಭಾಕರ್, ಆರೋಗ್ಯ ಅಧಿಕಾರಿ ರೋಹಿತ್ ಹಾಗೂ ದೇವಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಡಿ.16 ರಂದು ವಿದ್ಯುತ್ ವ್ಯತ್ಯಯ

ಹಾಸನ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಡಿ.16 ರಂದು 66/11ಕೆ.ವಿ ಶಾಂತಿಗ್ರಾಮ ವಿ.ವಿ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಶಾಂತಿಗ್ರಾಮ ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಕೆಂಚಟ್ಟಹಳ್ಳಿ, ಯೋಗಿಹಳ್ಳಿ, ಮರ್ಕುಲಿ, ಮೆಲ್ಲಳ್ಳಿ, ಗಾಡೇನಹಳ್ಳಿ, ಹಂಪನಹಳ್ಳಿ, ಸಾರಾಪುರ, ಕಾರೆಕೆರೆ, ನಾಗೇನಹಳ್ಳಿ, ದೇವಿಹಳ್ಳಿ, ಹಗ್ಗಡೆಹಳ್ಳಿ, ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಾಗುವ ಪ್ರದೇಶಗಳ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಕವಿಪ್ರನಿನಿ ಪ್ರಕಟಣೆ ತಿಳಿಸಿದೆ.

ಬಿ.ಎಸ್.ರವಿಗೆ ನ್ಯಾಷನಲ್ ಫೆಲೋಶಿಪ್ ಅವಾರ್ಡ್

ಅರಕಲಗೂಡು: ತಾಲ್ಲೂಕಿನ ಬೋಳ ಕ್ಯಾತನಹಳ್ಳಿಯ ರಂಗ ಕರ್ಮಿ ಬಿ.ಎಸ್.ರವಿ ಅವರು ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯ 2025ರ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ನ್ಯಾಷನಲ್ ಫೆಲೋಶಿಪ್ ಅವಾರ್ಡ್‌ಗೆ ಭಾಜನರಾಗಿದ್ದಾರೆ.

ಡಿ. 12 ರಂದು ನವದೆಹಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರಧಾನ ನೆರವೇರಲಿದೆ. ಕೃಷಿ ಕುಟುಂಬದಿಂದ ಬಂದಿರುವ ರವಿ ರಂಗಭೂಮಿ ಕಲಾವಿದರಾಗಿ ಹಲವಾರು ಪೌರಾಣಿಕ ನಾಟಕಗಳಲ್ಲಿ ನಾರದ, ಕೃಷ್ಣ, ರಾವಣ, ಭೀಮ, ದೃತರಾಷ್ಟ್ರ, ಭೀಷ್ಮ, ದುರ್ಯೋಧನ ಇನ್ನೂ ಹಲವು ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಹನುಮ ಜಯಂತಿಗೆ ಎಲ್ಲರ ಸಹಕಾರ ಅಗತ್ಯ: ಎಸ್ಪಿ

• ಪ್ರಜೋದಯ ವರದಿ

ಬೇಲೂರು: ವಿಶ್ವ ಪ್ರವಾಸಿ ತಾಣ ಬೇಲೂರಿನಲ್ಲಿ ಪ್ರತಿ ವರ್ಷ ನಡೆಯುವ ಹನುಮ ಜಯಂತಿ ಮತ್ತು ಶೋಭಯಾತ್ರೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೋಲಿಸ್ ಇಲಾಖೆ ಕ್ರಮ ವಹಿಸಿದ್ದು, ಇಲಾಖೆಯೊಂದಿಗೆ ಸಾರ್ವಜನಿಕರು ಕೂಡ ಹೆಚ್ಚಿನ ಸಹಕಾರ ನೀಡಬೇಕು, ಎಲ್ಲಾ ಧರ್ಮಗಳ ಸಾಮರಸ್ಯಕ್ಕೆ ಹನುಮ ಜಯಂತಿ ಊರಿನ ಹಬ್ಬವಾಗಲಿ ಎಂದು ಎಸ್ಪಿ ಮೊಹಮ್ಮದ್ ಸುಜಿತಾ ಅವರು ಕರೆ ನೀಡಿದರು.

ಪಟ್ಟಣದ ನೆಹರು ನಗರದ ಪೊಲೀಸ್ ಆವರಣದಲ್ಲಿ ನಡೆದ ಶಾಂತಿಸಭೆಯಲ್ಲಿ ಮಾತನಾಡಿ, ನಾನು ಕೆಲ ಭಾಗದಲ್ಲಿ ಹನುಮ ಜಯಂತಿಗಳ ಬಗ್ಗೆ ತಿಳಿದಿರುವೆ. ಆದರೆ ಬೇಲೂರಿನಲ್ಲಿ ನಡೆಯುವ ಹನುಮ ಉತ್ಸವದ ಭವ್ಯತೆ ಇತರರಿಗೆ ಮಾದರಿಯಾಗಿದೆ. ಇಲ್ಲಿನ ಹನುಮ ಉತ್ಸವಕ್ಕೆ ಪೊಲೀಸ್ ಭದ್ರತೆ ನೀಡಬೇಕಾದ ಹಿನ್ನೆಲೆಯಲ್ಲಿ ಹನುಮ ಜಯಂತಿ ಸಮಿತಿ ಹೆಚ್ಚಿನ ಸ್ವಯಂ ಸೇವಕರನ್ನು ನೇಮಿಸಿಕೊಳ್ಳುವ ಮೂಲಕ ಅವರಿಗೆ ಸಮವಸ್ತ್ರ ನೀಡಬೇಕಿದೆ. ವಿಶೇಷವಾಗಿ ಮೆರವಣಿಗೆ ಮತ್ತು ವಾಹನಗಳಿಗೆ ಸುಗಮ ಸಂಚಾರಕ್ಕೆ ಸದ್ಯ ಡಿವೈಎಸ್‌ಪಿ ಮತ್ತು ಇಲ್ಲಿನ ಪೊಲೀಸರಿಗೆ ಮಾರ್ಗದರ್ಶನ ನೀಡಲಾಗಿದೆ ಎಂದರು.

ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದಂತೆ ಸಿಸಿಟಿವಿ ಅಳವಡಿಸಬೇಕು ಮತ್ತು ಪ್ರತಿ ಅಂಗಡಿಗಳು ಕಡ್ಡಾಯವಾಗಿ ಸಿಸಿಟಿವಿ ಅಳವಡಿಸಲು ಮುಂದಾಗಿ, ಕಳೆದ ವರ್ಷ ಕೂಡ ಶಾಂತಿಯುತ ಮೆರವಣಿಗೆ ನಡೆದ ಬಗ್ಗೆ ಇಲ್ಲಿನ ಶಾಸಕರೇ ನಮಗೆ ಅಭಿ ನಂದನಾ ಪತ್ರ ನೀಡಿದ್ದಾರೆ. ಈ ಭಾರಿ ಕೂಡ ಶಾಂತಿಯುತವಾಗಿ ನಡೆ ಯಲಿ ಎಂದ ಅವರು, ಬೇಲೂರಿನಲ್ಲಿ ನಡೆಯುವ ಹನುಮ ಉತ್ಸವ ಈಗಾ ಗಲೇ ರಾಜ್ಯಮಟ್ಟದ ತನ್ನದೆಯಾದ ಖ್ಯಾತಿ ಪಡೆದ ಹಿನ್ನೆಲೆಯಲ್ಲಿ ಹೊರಗಿ ನಿಂದ ಇಲ್ಲಿಗೆ ಬರುವವರ ಸಂಖ್ಯೆ ಹೆಚ್ಚಾಗಬಹುದು ಮತ್ತು ಕೆಲ ಹೊರಗಿನವರು ಉದ್ದೇಶಪೂರ್ವಕವಾಗಿ ಅಹಿತಕರ ಘಟನೆಗಳಿಗೆ ಸಾಕ್ಷಿಯಾಗುವ ಕಾರಣದಿಂದ ಆಯೋಜಕರು ಇಂತವರ ಬಗ್ಗೆ ಮಾಹಿತಿ ನೀಡಬೇಕು ಎಂದರು.

ಶ್ರೀ ವೀರಾಂಜನೇಯ ದೇಗುಲ ಟ್ರಸ್ಟ್ ಅಧ್ಯಕ್ಷ ಮೋಹನ್ ಕುಮಾರ್ ಮಾತನಾಡಿ, ಕಳೆದ 12 ವರ್ಷದಿಂದ ಬೇಲೂರಿನಲ್ಲಿ ಹನುಮ ಜಯಂತಿ ವರ್ಷ ವರ್ಷಕ್ಕೆ ಹೊಸತನ ಮತ್ತು ಅದ್ದೂರಿಯಾಗಿ ನಡೆಯುತ್ತಿದೆ. ಡಿಸೆಂಬರ್ 13 ಶನಿವಾರ ಬೆಳಿಗ್ಗೆ ಪೂಜೆ ಬಳಿಕ ಮಧ್ಯಾಹ್ನ 12 ಕ್ಕೆ ಭಕ್ತರಿಗೆ ಅನ್ನ ದಾಸೋಹ ಏರ್ಪಡಿಸಿದೆ. ಬಳಿಕ ಉತ್ಸವಕ್ಕೆ ಚಾಲನೆ ನೀಡಲಾಗುತ್ತದೆ ಎಂದು ತಿಳಿಸಿದರು.

ಅಪರ ಜಿಲ್ಲಾ ಪೋಲಿಸ್ ವರಿಷ್ಠಾಧಿಕ

2027ರ ಜನಗಣತಿಗೆ 11,718 ಕೋ. ರೂ.: ಸಂಪುಟ ಅಸ್ತು

• ಪ್ರಜೋದಯ ವರದಿ

ನವದೆಹಲಿ: ದೇಶದಾದ್ಯಂತ ನಡೆಸಲು ಉದ್ದೇಶಿಸಿರುವ 2027ರ ಜನಗಣತಿಗೆ 11,718 ಕೋಟಿ ರೂ. ಅನುದಾನ ನೀಡಲು ಕೇಂದ್ರ ಸಚಿವ ಸಂಪುಟವು ಅನುಮೋದನೆ ನೀಡಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿರುವ ವೈಷ್ಣವ್, ಡಿಜಿಟಲ್ ತಂತ್ರಜ್ಞಾನದ ಅಳವಡಿಕೆಯೊಂದಿಗೆ ಎರಡು ಹಂತಗಳಲ್ಲಿ ಜನಗಣತಿ ನಡೆಸಲಾಗುವುದು. 2026ರ ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ನಡೆಯುವ ಮೊದಲ ಹಂತದ ವೇಳೆ ಮನೆಗಳ ಗಣತಿ ಮಾಡಲಾ ಗುವುದು. 2027ರ ಫೆಬ್ರುವರಿಯಲ್ಲಿ ಜನರ ಗಣತಿ ಪ್ರಕ್ರಿಯೆ ನಡೆಯಲಿದೆಯೆಂದು ಮಾಹಿತಿ ನೀಡಿದ್ದಾರೆ.

2027ರ ಜನಗಣತಿಯು ಮೊದಲ ಡಿಜಿಟಲ್ ಗಣತಿಯಾಗಲಿದೆ. ದತ್ತಾಂಶ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಜನಗಣತಿ ಪ್ರಕ್ರಿಯೆಯ ಡಿಜಿಟಲ್ ವಿನ್ಯಾಸವನ್ನು ರೂಪಿಸಲಾಗಿದೆ. ಜನ ಗಣತಿ ಕಾರ್ಯದ ಜವಾಬ್ದಾರಿ ವಹಿಸಿಕೊಳ್ಳಲು ಅಗತ್ಯವಾಗಿರುವ ಅಧಿಕಾರಿಗಳ ನೇಮಕಾತಿ ಯನ್ನು ಜನವರಿ 15ರೊಳಗೆ ಪೂರ್ಣಗೊಳಿಸಬೇಕೆಂದು ಭಾರತೀಯ ನೋಂದಣಿಯ ಮಹಾ ನಿರ್ದೇಶ ನಾಲಯವು (ಆರ್‌ಜಿಐ) ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಇತ್ತೀಚೆಗೆ ನಿರ್ದೇಶನ ನೀಡಿತ್ತು.

ಕೇಂದ್ರಾಡಳಿತ ಪ್ರದೇಶವಾದ ಲಡಾಖ್ ಮತ್ತು ಜಮ್ಮು-ಕಾಶ್ಮೀರದ ಹಿಮದಿಂದ ಆವೃತ ವಾಗಿರುವ ಪ್ರದೇಶ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಿಗೆ ಜನಗಣತಿಯನ್ನು ಸೆಪ್ಟೆಂಬರ್‌ನಲ್ಲಿ ನಡೆಸಲಾಗುವುದು ಎಂದರು.

ಸುಮಾರು 30 ಲಕ್ಷ ಕ್ಷೇತ್ರ ಕಾರ್ಯಕರ್ತರು ಜನಗಣತಿಯಲ್ಲಿ ತೊಡಗಿದ್ದು, 1.5 ಕೋಟಿಗೂ ಹೆಚ್ಚು ಮಾನವ ದಿನದ ಉದ್ಯೋಗ ಸೃಷ್ಟಿಯಾಗಲಿದೆ. 2027ರ ಜನಗಣತಿಯು ಭಾರತದ ಮೊಟ್ಟ ಮೊದಲ ಡಿಜಿಟಲ್ ಜನಗಣತಿಯಾಗಿದೆ. ಡೇಟಾ ನೀಡುವುದು ಅತ್ಯುತ್ತಮವಾಗಿದ್ದು, ಬಳಕೆದಾರ ಸ್ನೇಹಿಯಾಗಿದೆ. ಅದರಿಂದ ನೀತಿ ನಿರೂಪಣೆಗೆ ಅಗತ್ಯವಿರುವ ಎಲ್ಲಾ ಪ್ರಶ್ನೆಗಳು ಬಟನ್ ಕ್ಲಿಕ್‌ನಲ್ಲಿ ಲಭ್ಯವಿರುತ್ತವೆ. ಸಂಪೂರ್ಣ ಜನಗಣತಿ ಪ್ರಕ್ರಿಯೆಯನ್ನು ಸೂಕ್ತ ಸಮಯದಲ್ಲಿ ನಿರ್ವಹಿಸಲು ಮತ್ತು ಮೇಲ್ವಿಚಾರಣೆ ಮಾಡಲು ಜನಗಣತಿ ನಿರ್ವಹಣೆ ಮತ್ತು ಮಾನಿಟರಿಂಗ್ ಸಿಸ್ಟಮ್ ಪೋರ್ಟಲ್ ಅನ್ನು ಅಭಿವೃದ್ಧಿ ಪಡಿಸಲಾಗಿದೆ. ಈ ದೊಡ್ಡ ಪ್ರಮಾಣದ ಡಿಜಿಟಲ್ ಕಾರ್ಯಾಚರಣೆಗೆ ಸೂಕ್ತ ಭದ್ರತಾ ವೈಶಿಷ್ಟ್ಯಗ ಳೊಂದಿಗೆ ಸಾರ್ವಜನಿಕರಿಗೆ ಸ್ವಯಂ-ಎಣಿಕೆಗೆ ಆಯ್ಕೆಯನ್ನು ಒದಗಿಸಲಾಗುವುದು ಎಂದು ಅವರು ಹೇಳಿದರು.

ದೇಶದಲ್ಲಿನ ವಿಶಾಲವಾದ ಸಾಮಾಜಿಕ ಮತ್ತು ಜನಸಂಖ್ಯಾ ವೈವಿಧ್ಯತೆ ಮತ್ತು ಸಂಬಂಧಿತ ಸವಾಲು ಗಳನ್ನು ಗಮನಿಸಿದರೆ, ಎರಡನೇ ಹಂತದಲ್ಲಿನ ಜನಗಣತಿ ವೇಳೆ ಜಾತಿ ಡೇಟಾವನ್ನು ವಿದ್ಯುನ್ಮಾನ ವಾಗಿ ಸಂಗ್ರಹಿಸಲಾಗುವುದೆಂದರು.

ಕಾಫಿ ಧಾರಣೆ: ಸಮಾನಾಂತರ ಕಾಯ್ದುಕೊಂಡ ಅರೇಬಿಕಾ

» ಮೊದಲನೇ ಪುಟದಿಂದ

ಯಲ್ಲಿ ಡಿಸೆಂಬರ್ ತಿಂಗಳ ಅರೇಬಿಕಾ (ಕೆಸಿಝಡ್25) +12.80 (+3.18%) ಧಾರಣೆ ಏರಿಕೆ ಕಂಡು ಬಂದಿತು. ರೋಬಸ್ಟಾ (ಆರ್‌ಎಂಎಫ್26) ಕೂಡ +90 (+2.01%) ಏರಿಕೆಯಾಗಿದೆ. ಅಮೇರಿಕಾ-ಬ್ರೆಜಿಲ್ ಕಾಫಿಗೆ ವಿಧಿಸಿರುವ ಭಾರೀ ಸುಂಕಗಳು ಮಾರುಕಟ್ಟೆಯಲ್ಲಿ ಅನಿಶ್ಚಿತತೆಯನ್ನು ಉಂಟು ಮಾಡಿದ್ದು, ಬೆಲೆ ಏರಿಕೆಗೆ ಪ್ರಮುಖ ಕಾರಣ ವಾಗಿದೆ. ಟ್ರಂಪ್ ಆಡಳಿತವು ಕಳೆದ ಶುಕ್ರವಾರ ಅಮೇರಿಕಾದಲ್ಲಿ ಉತ್ಪಾದಿಸದ ವಸ್ತುಗಳ ಮೇಲೆ ಶೇ.10ರಷ್ಟು ಪರಸ್ಪರ ಸುಂಕಗಳನ್ನು ತೆಗೆದು ಹಾಕಿದರೂ, ಬ್ರೆಜಿಲ್ ಮೇಲೆ ವಿಧಿಸಿರುವ ಪ್ರತ್ಯೇಕ ಶೇ.40 ರಾಷ್ಟ್ರೀಯ ತುರ್ತು ಸುಂಕಕ್ಕೆ ಇದು ಅನ್ವಯವಾಗುವುದಿಲ್ಲವೆಂದು ಬ್ರೆಜಿಲ್ ಉಪ ರಾಷ್ಟ್ರಪತಿ ತಿಳಿಸಿದ್ದಾರೆ. ಈ ಶೇ.40ರಷ್ಟು ಸುಂಕದ ವಿನಾಯಿತಿ ಕಾಫಿ ಆಮದುದಾರರಿಗೆ ದೊರೆಯುತ್ತದೆಯೇ ಎಂಬುದರ ಬಗ್ಗೆ ಅಮೇರಿಕಾ ಇನ್ನೂ ಸ್ಪಷ್ಟಪಡಿಸಿಲ್ಲ.

ಐಸಿಬಿ ಕಾಫಿ ಸಂಗ್ರಹ ವೇಗವಾಗಿ ಕುಸಿಯುತ್ತಿರುವುದು ಮಾರುಕಟ್ಟೆಯನ್ನು ಮತ್ತಷ್ಟು ಬಲಪಡಿಸಿದೆ. ಅರೇಬಿಕಾ ಕಾಫಿ ಸಂಗ್ರಹವು ಕನಿಷ್ಠ 3,96,513 ಬ್ಯಾಗ್‌ಗಳಿಗೆ ಇಳಿಕೆಯಾಗಿತ್ತು. ರೋಬಸ್ಟಾ ಸಂಗ್ರಹ ಕನಿಷ್ಠ 5,648 ಲಾಟ್‌ಗಳ ಮಟ್ಟ ತಲುಪಿದೆ. ಸುಂಕದ ಒತ್ತಡದಿಂದ ಅಮೇರಿಕಾ ಖರೀದಿದಾರರು ಬ್ರೆಜಿಲ್‌ನಿಂದ ಹೊಸ ಕಾಫಿ ಒಪ್ಪಂದವನ್ನು ರದ್ದುಗೊಳಿಸುತ್ತಿದ್ದಾರೆ. ಸಾಮಾನ್ಯವಾಗಿ ಅಮೇರಿಕಾದಲ್ಲಿ ಬಳಕೆಯಾಗುವ ತಯಾರಿಸಿದ ಕಾಫಿಯ ಸುಮಾರು ಒಂದು-ಮೂರು ಭಾಗ ಬ್ರೆಜಿಲ್‌ನಿಂದ ಬರುತ್ತದೆ. ಆದರೆ, ಈ ವರ್ಷ ಆಗಸ್ಟ್-ಅಕ್ಟೋಬರ್ ಅವಧಿಯಲ್ಲಿ ಬ್ರೆಜಿಲ್‌ನಿಂದ ಅಮೇರಿಕಾಕ್ಕೆ ಕಾಫಿ ಖರೀದಿ ಶೇ.52 ರಷ್ಟು ಕುಸಿತ ಕಂಡು ಕೇವಲ 983,970 ಬ್ಯಾಗ್‌ಗಳಿಗೆ ಇಳಿದಿದೆ. ಈ ಪರಿಣಾಮ ಭಾರತೀಯ ಮಾರುಕಟ್ಟೆಯಲ್ಲಿ ಕಾಫಿಗೆ ಉತ್ತಮ ಬೆಲೆ ಸಿಗುವ ನಿರೀಕ್ಷೆ ಇದೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.

ಶಾಲೆ-ಕಾಲೇಜಿಗಳಿಗೆ ಕ್ರಿಸ್‌ಮಸ್ ಹೆಚ್ಚುವರಿ ರಜೆ ನೀಡದಂತೆ ಆಗ್ರಹ

• ಪ್ರಜೋದಯ ವರದಿ

ಹಾಸನ: ಸರ್ಕಾರದ ರಜೆ ಆದೇಶ ಉಲ್ಲಂಘಿಸಿ ಕ್ರಿಶ್ಚಿಯನ್ ಆಡಳಿತದಲ್ಲಿರುವ ಶಾಲೆಗಳಿಗೆ ಅನಧಿಕೃತ ರಜೆ ಮತ್ತು ಪರೀಕ್ಷಾ ಚಟುವಟಿಕೆ ನಡೆಸುವುದರ ವಿರುದ್ಧ ಕ್ರಮ ತೆಗೆದುಕೊಳ್ಳ ಬೇಕೆಂದು ಒತ್ತಾಯಿಸಿ ಶ್ರೀರಾಮ ಸೇನೆಯಿಂದ ಶುಕ್ರವಾರ ಪ್ರತಿಭಟನೆ ನಡೆಯಿತು.

ನಗರದ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಕಚೇರಿ ಎದುರು ಪ್ರತಿಭಟನೆ ನಡೆಸಿ, ಉಪ ನಿರ್ದೇಶಕ ಬಲರಾಮ್ ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಶ್ರೀರಾಮ ಸೇನೆ ದಕ್ಷಿಣ ಪ್ರಾಂತ ಸಹ ಕಾರ್ಯದರ್ಶಿ ಜಾನೆಕೆರೆ ಹೇಮಂತ್ ಮಾತನಾಡಿ, ಸರ್ಕಾರದ ಅಧಿಸೂಚನೆ ಪ್ರಕಾರ ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆಗಳು, ಅನುದಾನಿತ, ಅನುದಾನ ರಹಿತ ಶಾಲಾ-ಕಾಲೇಜುಗಳು ನಿಗದಿತ ರಜೆ ದಿನಗಳಲ್ಲಿ ಕಡ್ಡಾಯವಾಗಿ ರಜೆ ಘೋಷಿಸಬೇಕಾಗಿದೆ. ಆದರೆ, ಕೆಲವು ಖಾಸಗಿ ಶಾಲೆಗಳು, ವಿಶೇಷವಾಗಿ ಕ್ರಿಶ್ಚಿಯನ್ ಆಡಳಿತದಲ್ಲಿರುವ ಸಂಸ್ಥೆಗಳು, ಸರ್ಕಾರದ ರಜೆ ಆದೇಶವನ್ನು ಉಲ್ಲಂಘಿಸಿ, ದಸರಾ ರಜೆಯನ್ನು ರದ್ದು ಮಾಡಿ ತರಗತಿ ಹಾಗು ಪರೀಕ್ಷೆ ನಡೆಸಿದ್ದಾರೆಂದು ದೂರಿದರು.

ಡಿ.25 ಕ್ರಿಸ್‌ಮಸ್ ಹಬ್ಬಕ್ಕೆ ಸರ್ಕಾರ ಅಧಿಕೃತವಾಗಿ ಒಂದು ದಿನ ರಜೆಯನ್ನು ಮಾತ್ರ ಘೋಷಿಸಿದೆ. ಆದರೆ, ಅನಧಿಕೃತವಾಗಿ ಕೆಲವು ಕ್ರಿಶ್ಚಿಯನ್ ನಿರ್ವಹಣೆಯ ಶಾಲೆಗಳು 10 ದಿನಗಳವರೆಗೆ ರಜೆ ಘೋಷಿಸುತ್ತಿರುವುದು ಕಾನೂನು ಬಾಹಿರ ಮತ್ತು ಸರ್ಕಾರದ ಆದೇಶಕ್ಕೆ ವಿರುದ್ಧವಾಗಿದೆ. ಈ ಶಾಲೆಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿ ಹಿಂದು ಸಮುದಾಯದವರೇ ಆಗಿದ್ದರೂ, ಅವರ ಮೇಲೆ ಕ್ರಿಶ್ಚಿಯನ್ ಧಾರ್ಮಿಕ ಆಚರಣೆಗಳನ್ನು ಬಲವಂತವಾಗಿ ಹೇರಲು ಪ್ರಯತ್ನಿಸುವುದು ಧಾರ್ಮಿಕ-ಸಾಂಸ್ಕೃತಿಕ ಹಸ್ತಕ್ಷೇಪ ಮಾಡಿದಂತಾ ಗುತ್ತದೆ ಎಂದು ಆರೋಪಿಸಿದರು.

ಸರ್ಕಾರದ ರಜೆ ನಿಯಮ ಉಲ್ಲಂಘಿಸಿರುವ ಸಂಸ್ಥೆಗಳ ಮೇಲೆ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಕ್ರಿಶ್ಚಿಯನ್ ನಿರ್ವಹಿತ ಶಾಲೆಗಳ ವಿರುದ್ಧ ಹಿಂದೂ ಸಮುದಾಯದ ವತಿಯಿಂದ ದೊಡ್ಡ ಮಟ್ಟದ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು. ಶ್ರೀರಾಮಸೇನೆ ಜಿಲ್ಲಾಧ್ಯಕ್ಷ ಧರ್ಮ ನಾಯಕ್, ಉಪಾಧ್ಯಕ್ಷ ಪ್ರದೀಪ್, ನಗರಾಧ್ಯಕ್ಷ ದರ್ಶನ್, ತಾಲ್ಲೂಕು ಅಧ್ಯಕ್ಷ ಜಗದೀಶ್, ಗೋರಕ್ಷಕ ಪ್ರಮುಖ ವಿನಯ್, ತಾಲ್ಲೂಕು ಉಪಾಧ್ಯಕ್ಷ ಅಜಿತ್, ಕಾರ್ಮಿಕ ವಿಭಾಗದ ದೊರೆಸ್ವಾಮಿ, ಕಾರ್ಯದರ್ಶಿ ಬಸವರಾಜು, ಮಹೇಶ್ ಬಾಗಲಕೋಟೆ, ಪ್ರವೀಣ್ ಇದ್ದರು.

ಕೊಲ್ಲಾಪುರದಮ್ಮ ದೇವಾಲಯ ಹುಂಡಿ ಕಳವು

• ಪ್ರಜೋದಯ ವರದಿ

ಅರಸೀಕೆರೆ: ದೇವಾಲಯ ಬಾಗಿಲು ಮುರಿದು ದೇವರ ಮೂರ್ತಿಗೆ ಹಾಕಿದ್ದ ಚಿನ್ನದ ಸರ ಹಾಗು ಹುಂಡಿ ಹಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಬಸವನಹಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ನಡೆದಿದೆ.

ಗ್ರಾಮದ ಕೊಲ್ಲಾಪುರದಮ್ಮ ದೇವಾಲಯದಲ್ಲಿ ಕಳ್ಳತನ ನಡೆದಿದೆ. ಅರ್ಚಕ ರಂಗಸ್ವಾಮಿ ಅವರು ಡಿ.11ರ ಬೆಳಿಗ್ಗೆ ಪೂಜೆ ಮಾಡಲೆಂದು ದೇವಸ್ಥಾನಕ್ಕೆ ಹೋದಾಗ ಬೀಗ ಮುರಿದಿರುವುದು ತಿಳಿದಿದೆ. ಕಬ್ಬಿಣದ ಆಯುಧದಿಂದ ಬಾಗಿಲು ಮೀಟಿ ಒಳನುಗ್ಗಿರುವ ಕಳ್ಳರು ದೇವಿಗೆ ಹಾಕಿದ್ದ 20 ಸಾವಿರ ರೂ. ಮೌಲ್ಯದ 2 ಗ್ರಾಂ ತೂಕದ ಚಿನ್ನದ ಸರ, ಹುಂಡಿಯಲ್ಲಿದ್ದ ಅಂದಾಜು 15 ಸಾವಿರ ರೂ. ದೋಚಿದ್ದಾರೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

1.50 ಲಕ್ಷ ರೂ. ಮೌಲ್ಯದ ಸಾಮಾಗ್ರಿ ಕಳವು

ಚನ್ನರಾಯಪಟ್ಟಣ: ಬಾಗೂರು ಹೋಬಳಿ ಕೋಡಿಹಳ್ಳಿ ಗ್ರಾಮದಲ್ಲಿರುವ ಆಕ್ಸಯ ಕಲ್ಪ ಫಾರಂ ಅಂಡ್ ಪುಡ್ ಕಂಪನಿಯಲ್ಲಿ ಸುಮಾರು 1.50 ಲಕ್ಷ ರೂ. ಬೆಲೆಯ ಸಾಮಾಗ್ರಿ ಕಳ್ಳತನ ಮಾಡಲಾಗಿದೆ. ಕಳೆದ ನಾಲ್ಕು ವರ್ಷ ಗಳಿಂದ ಕಂಪನಿ ಕಾರ್ಯನಿರ್ವಹಿಸುತ್ತಿದ್ದು 2025ರ ಅ.1ರಿಂದ 2025ರ ಡಿ.10ರ ವರೆಗಿನ ಸ್ಟಾಕ್ ಪರಿಶೀಲಿಸಿ ದಾಗ ವ್ಯತ್ಯಾಸ ಕಂಡುಬಂದಿದೆ. 14 ಬ್ಯಾಟರಿ, 3 ಇನ್ವೆಟರ್ ಹಾಗು 6 ಮ್ಯಾಕ್ನಾಟಿಕ್ ಪಂಪ್ ಕಳ್ಳತನವಾಗಿದ್ದು ಅದರ ಒಟ್ಟು ಮೌಲ್ಯ 1.50 ಲಕ್ಷ ರೂ. ಆಗಿದೆ.

ಗ್ರಾಮ ಪಂಚಾಯಿತಿಯು ಅಭಿವೃದ್ಧಿಯ ಸಂಪರ್ಕ ಸೇತುವೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನ ನುಗ್ಗೇಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಎನ್. ಆರ್.ನಟರಾಜ್ ಅವರು ಶುಕ್ರವಾರ ಅವಿರೋಧವಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ಎನ್.ಆರ್.ನಟರಾಜ್ ಅವರನ್ನು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮ ಬಾಲಕೃಷ್ಣ ಅವರು ಅಭಿನಂದಿಸಿ ಮಾತನಾಡಿ, ಪಕ್ಷ ಬೇಧ ಮರೆತು ಪಾರದರ್ಶಕವಾಗಿ ಕೆಲಸ ಮಾಡುವ ಮೂಲಕ ಜನಸೇವೆ ಮಾಡುವುದು ಅಗತ್ಯ ಎಂದು ಹೇಳಿದರು.

ಗ್ರಾಮ ಪಂಚಾಯಿತಿಯು ಸರ್ಕಾರ ಹಾಗೂ ಸಾರ್ವಜನಿಕರ ನಡುವೆ ಸಂಪರ್ಕ ಸೇತುವೆ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಗ್ರಾಮೀಣ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಕೇಂದ್ರವಾಗಿದೆ. ಗ್ರಾಮ ಪಂಚಾಯಿತಿ ಯೋಜನೆಗಳನ್ನು ಸದ್ಬಳಿಕೆ ಮಾಡಿಕೊಂಡು ಕೆಲಸ ಮಾಡುವುದು ಪ್ರತಿ ಯೊಬ್ಬ ಸದಸ್ಯರ ಕರ್ತವ್ಯ ಎಂದು ತಿಳಿಸಿದರು.

ಗ್ರಾಮದ ಅಭಿವೃದ್ಧಿ ಸಲುವಾಗಿ ಚುನಾವಣೆ ವೇಳೆ ಜನತೆ ನಿಮ್ಮನ್ನು ಆಯ್ಕೆ ಮಾಡಿರುತ್ತಾರೆ. ಅವರ ನಂಬಿಕೆಗೆ ಅರ್ಹರಾಗಿ ಕೆಲಸ ಮಾಡ ಬೇಕು. ಅಗತ್ಯ ಮೂಲ ಸೌಲಭ್ಯಗಳಾದ ಕುಡಿಯುವ ನೀರು, ಸೂಕ್ತ ರಸ್ತೆ ಹಾಗೂ ಚರಂಡಿ ನಿರ್ಮಾಣ, ಬೀದಿ ದೀಪಗಳ ನಿರ್ವಹಣೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಗ್ರಾಮೀಣ ಪ್ರದೇಶ ಅಭಿವೃದ್ಧಿ ಹೊಂದಿದರೆ ಮಾತ್ರ ದೇಶ ಪ್ರಗತಿ ಕಾಣಲು ಸಾಧ್ಯವಾಗಲಿದೆ ಎಂದು ಸಲಹೆ ನೀಡಿದರು.

ನೂತನ ಅಧ್ಯಕ್ಷ ಎನ್.ಆರ್.ನಟರಾಜ್ ಅವರು ಮಾತನಾಡಿ, ಶಾಸಕರಾದ ಸಿ.ಎನ್. ಬಾಲಕೃಷ್ಣ ಅವರ ಮಾರ್ಗದರ್ಶನದಲ್ಲಿ ಸರ್ವ ಸದಸ್ಯರ ವಿಶ್ವಾಸ ಹಾಗೂ ಸಲಹೆ ಪಡೆದು ವ್ಯಾಪ್ತಿಯ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಯಾದ ಎನ್.ಆರ್.ನಟರಾಜ್ ಅವರನ್ನು ವಿವಿಧ ಕ್ಷೇತ್ರದ ಗಣ್ಯರು, ಮುಖಂಡರು ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಅಭಿನಂದಿಸಲಾಯಿತು. ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು. ನುಗ್ಗೇಹಳ್ಳಿ ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ಟಿಎಪಿಸಿಎಂಎಸ್ ನಿರ್ದೇಶಕ ತೋಟಿ ನಾಗರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಆರ್. ದೊರೆಸ್ವಾಮಿ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವಿಕ್ಟರ್, ಮಾಜಿ ಅಧ್ಯಕ್ಷ ಸಂಪತ್ ಕುಮಾರ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಬೆಳಗಿಹಳ್ಳಿ ಪುಟ್ಟಸ್ವಾಮಿ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ನಟರಾಜ್, ಪ್ರಮುಖರಾದ ಜಾವಿದ್, ಗೋಪಾಲ್, ಗುಂಡಣ್ಣ, ಪಟೇಲ್ ಮುನ್ನ, ಹೊನ್ನೇಗೌಡ, ಶಿವಕುಮಾರ್, ವಿಠಲ್, ಪ್ರಕಾಶ್, ಕೆಂಪೇಗೌಡ, ದೊಡ್ಡಗನ್ನಿ ಸತೀಶ್, ಹೋಟೆಲ್ ರಾಜಣ್ಣ, ಗಿರೀಶ್ ಹಾಗೂ ಇತರರು ಇದ್ದರು.

ಎಡ್ಸ್ ಹೋಗಲಾಡಿಸಲು ಜಾಗೃತಿ ಅಭಿಯಾನ ಅಗತ್ಯ

• ಪ್ರಜೋದಯ ವರದಿ



ಬೇಲೂರು: ಜಾಗತಿಕ ವ್ಯವಸ್ಥೆಯಲ್ಲಿ ಆತಂಕ ಮೂಡಿಸಿದ ಏಡ್ಸ್ ಸಂಪೂರ್ಣವಾಗಿ ಹೋಗಲಾಡಿಸಲು ಸರ್ಕಾರ ಸಹಕಾರದ ಜೊತೆಗೆ ಜಾಗೃತಿ ಅಭಿಯಾನ ನಡೆಸಬೇಕೆಂದು ಜೆಎಂಎಫ್‌ಸಿ ಹಿರಿಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಸಲ್ಮಾ ಅವರು ಹೇಳಿದರು.

ಪಟ್ಟಣದಲ್ಲಿ ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ತಾಲ್ಲೂಕು ಆರೋಗ್ಯ ಕೇಂದ್ರ, ಲಯನ್ಸ್ ಸಂಸ್ಥೆ ಸಹಯೋಗದಲ್ಲಿ ನಡೆದ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಯಾವುದೇ ರೋಗವು ಮಾರಕವಾಗಿರುವುದಿಲ್ಲ ಆದರ ಬಗ್ಗೆ ಹೆಚ್ಚಿನ ಜಾಗೃತಿ ಇರಬೇಕು. ಹೆಚ್‌ಐವಿ ರೋಗವು ಸ್ಪರ್ಶದಿಂದಾಗಲಿ, ಊಟ ಮಾಡುವುದರಿಂದಾಗಲಿ ಬರುವುದಿಲ್ಲ. ಆದರ ಬಗ್ಗೆ ಸುರಕ್ಷಿತ ಜೀವನ ಅನುಸರಿಸುವುದರಿಂದ ಆರೋಗ್ಯಕರ ಜೀವನ ನಡೆಸಬಹುದೆಂದು ತಿಳಿಸಿದರು.

ಏಡ್ಸ್ ಪೀಡಿತರ ಬಗ್ಗೆ ಬೇಧ-ಭಾವ ತೋರುವುದು ಕಾನೂನಾತ್ಮಕ ಅಪರಾಧ. ಯಾರಿಗಾ ದರು ಹೆಚ್‌ಐವಿ ಪಾಸಿಟಿವ್ ಇದ್ದರೆ ಅವರ ಬಗ್ಗೆ ಅಸಡ್ಡೆ ತೋರದೆ ಅವರಿಗೆ ನಮ್ಮಂತೆ ಬದುಕುವ ಹಕ್ಕುಗಳಿವೆ. ಅಂತಹವರಿಗೆ ಮಾನಸಿಕವಾಗಿ ಧೈರ್ಯ ತುಂಬುವುದು ಎಲ್ಲರ ಕರ್ತವ್ಯ ಎಂದರು.

ಲಯನ್ಸ್ ಸಂಸ್ಥೆ ಮಾಜಿ ಅಧ್ಯಕ್ಷ ಡಾ.ಚಂದ್ರಮೌಳಿ ಅವರು ಮಾತನಾಡಿ, ಯುವ ಜನರಿಗೆ ವಿಶೇಷವಾಗಿ ಸಂದೇಶ ನೀಡಬೇಕಿದೆ. ಕಾರಣ ಯುವಕರೇ ನಮ್ಮ ದೇಶದ ಭವಿಷ್ಯ. ಸುರಕ್ಷಿತ ಜೀವನಶೈಲಿ, ಸರಿಯಾದ ಮಾಹಿತಿ ಮತ್ತು ಆಗಾಗ ಪರೀಕ್ಷೆ ಮಾಡಿಸಿಕೊಳ್ಳುವುದು ನಿಮ್ಮನ್ನು ಮತ್ತು ನಿಮ್ಮ ಸುತ್ತಲಿನವರನ್ನೂ ರಕ್ಷಿ ಸುತ್ತದೆ ಎಂದು ಹೇಳಿದರು.

ಸರ್ಕಾರಿ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಜಯಲಕ್ಷ್ಮೀ ನಾಯಕ್ ಅವರು ಮಾತನಾಡಿ, ಏಡ್ಸ್ ಬಗ್ಗೆ ಜನರಿಗೆ ಇರುವ ತಪ್ಪು ಕಲ್ಪನೆಗಳು ಮತ್ತು ಭಯಗಳು ಈಗಲೂ ದೊಡ್ಡ ಸವಾಲಾಗಿವೆ. ಹೆಚ್‌ಐವಿ ರೋಗಿಗಳು ಸಾಮಾನ್ಯ ಜೀವನ ನಡೆಸಬಹುದು, ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆದರೆ ಅವರು ಆರೋಗ್ಯಕರ ಬದುಕನ್ನು ಮುಂದುವರಿಸಬಹು ದಾಗಿದೆ. ಆದಾಗ್ಯೂ ಸಮಾಜದ ಬೆಂಬಲ ಸಹಾನುಭೂತಿ ಮತ್ತು ಸರಿಯಾದ ಮಾಹಿತಿ ಅವರ